Agri Newspaper Clippings
UASB Library
Jai Kisan

FRIDAY 14.11.2025

ಕೃಷಿಯತ್ತ ವಲಸಿತ ಯುವಕರ ಒಲವು: ಚಲುವ

ಸರ್ಕಾರಿ ಸವಲತ್ತು ಬಳಸಿ ಪ್ರಗತಿಪರರಾಗಿ: ಕೃಷಿ ಸಚಿವರ ಸಲಹೆ | ನಾಲ್ಕು ದಿನಗಳ ಕೃಷಿ ಮೇಳ-2025ಕ್ಕೆ ಚಾಲನೆ



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣದಲ್ಲಿ ಕೃಷಿ ಮೇಳಕ್ಕೆ ಚಾಲನೆ ನೀಡಲಾಯಿತು.



ಕೃಷಿ ಮೇಳದಲ್ಲಿ ಸೂರ್ಯಕಾಂತಿಯ ಮುಂದೆ ಸೆಲ್ಫಿ ತಗದುಕೊಂಡು ಖುಷಿಪಟ್ಟ ಯುವತಿಯರು



ಮೂಲ ಹಿಡಿದು ಯುವತಿ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಉದ್ಯೋಗ ಅರಿಸಿಕೊಂಡು ನಗರ ಪ್ರದೇಶಗಳ ಕಡೆಗೆ ವಲಸೆ ಹೋಗುತ್ತಿದ್ದ ಯುವಕರು ಕೃಷಿಯತ್ತ ಆಕರ್ಷಿತರಾಗುತ್ತಿದ್ದಾರೆ. ಕಡಿಮೆ ವೇತನ ಇರುವವರಿಗೆ ಕೃಷಿ ಮುಖ್ಯ ಉದ್ಯೋಗವಾಗುತ್ತಿದ್ದು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಪ್ರಗತಿಪರ ಕೃಷಿಕರಾಗಬೇಕು,ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸಲಹೆ ನೀಡಿದರು.

ಗುರುವಾರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ 'ಸಮೃದ್ಧ ಕೃಷಿ -ವಿಕಸಿತ ಭಾರತ ನೆಲ, ಜಲ ಮತ್ತು ಬೆಳೆ' ಶೀರ್ಷಿಕೆಯಡಿ ನಾಲ್ಕು ದಿನಗಳ ಕಾಲ ಆಯೋಜಿಸಲಾಗಿರುವ ಕೃಷಿ ಮೇಳ-2025ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಪಡೆದಿರುವ ದೇಶದ ಪ್ರಮುಖ ವಿಶ್ವವಿದ್ಯಾಲಯವಾಗಿದೆ. ಕೃಷಿಕರಿಗೆ ಇಲ್ಲಿನ ವಿಜ್ಞಾನಿಗಳು ಆವಿಷ್ಕರಿಸುವ ನೂತನ ತಳಿಗಳು, ಯಂತ್ರೋಪಕರಣಗಳಿಂದ ಲಾಭ ಸಿಗುವಂತಾಗಬೇಕು. ಕಡಿಮೆ ವೆಚ್ಚದಲ್ಲಿ ಉತ್ತಮ ಇಳುವರಿ ಮತ್ತು ಆದಾಯ ನೀಡುವ ಬೆಳೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಇಂತಹ ಕೃಷಿ ಮೇಳಗಳನ್ನು ಆಯೋಜಿಸಲಾಗಿದ್ದು, ಇದನ್ನು ಬಳಸಿಕೊಂಡು ರೈತರು ಉದ್ಯಮಿಗಳಾಗಿ ಬಲವರ್ಧನೆಗೊಳ್ಳಬೇಕು ಎಂದು ಹೇಳಿದರು. ಬೆಂಗಳೂರು ಕೃಷಿ ವಿವಿಯು ಪ್ರತಿ ವರ್ಷದಂತೆ ಉತ್ತಮ ತಳಿಗಳನ್ನು ಈ ಬಾರಿಯೂ ಬಿಡುಗಡೆಗೊಳಿಸಿದೆ. ರೈತರಿಗೆ ಕೃಷಿ ವಿವಿಗಳು ನೀಡಬೇಕಾಗಿರುವುದು ಕೂಡ ಇದನ್ನೇ ಎಂದ ಅವರು, ಕೃಷಿಯನ್ನು ಉದ್ಯಮೆಯಾಗಿ ಪರಿವರ್ತಿಸಿ ರೈತರಿಗೆ ಉತ್ತಮ ಆದಾಯ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಸೌಲಭ್ಯಗಳು ಹಾಗೂ ಕಾರ್ಯಕ್ರಮಗಳನ್ನು ನೀಡುತ್ತಿವೆ ಎಂದರು. ಕೇಂದ್ರ ಎಂಎಸ್‌ಎಂಇ, ಉದ್ಯೋಗ, ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಕೃಷಿ ವಲಯಕ್ಕೆ ಪೂರಕವಾಗಿ ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನ ಉದ್ಯಮಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಮಧ್ಯ ಏಷ್ಯಾದ ದೇಶಗಳಿಗೆ ಆಹಾರೋತ್ಪನ್ನಗಳನ್ನು ಸರಬರಾಜು ಮಾಡಲು ಕ್ರಮ ವಹಿಸಲಾಗುವುದು. ಭಾರತದಲ್ಲಿ 353 ಮಿಲಿಯನ್ ಟನ್ ಆಹಾರ ಬೆಳೆ, 355 ಟನ್ ತರಕಾರಿ, ಹಣ್ಣು ಬೆಳೆಯಲಾಗುತ್ತಿದೆ. ಆಹಾರ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬಿಯಾಗಿ ಎಲ್ಲರಿಗೂ ಆಹಾರ ಸಿಗುವಂತಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಕುಲಸಚಿವ ಡಾ. ಕೆ.ಸಿ. ನಾರಾಯಸ್ವಾಮಿ, ಕೃಷಿ ವಿವಿ ಸಹ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಜಿರಳೆ ಪಕೋಡ, ಮಿಡತೆ ಕಬಾಬ್!

• **ಸಂಪತ್ ತರೀಕೆರೆ**
ಕನ್ನಡಪ್ರಭ ವಾರ್ತೆ ಬೆಂಗಳೂರು

ಭಾರತೀಯ ಆಹಾರ ಸಂಸ್ಕೃತಿಗೆ ಒಗ್ಗಿಕೊಂಡ ನಮಗೆ ಊಟದಲ್ಲಿ ಹುಳ ಕಂಡರೂ ವಾಕರಿಕೆ ಬಂದು ಊಟವನ್ನು ಅರ್ಧಕ್ಕೆ ಬಿಡುವವರೇ ಹೆಚ್ಚು. ಹೀಗಿರುವಾಗ ಹುಳಗಳಲ್ಲೇ ತಯಾರಿಸಿರುವ ಖಾದ್ಯಗಳನ್ನು ಊಣ ಬಡಿಸಿದರೆ?

ಹೌದು, ಜಿರಳೆ, ಊಜಿಹುಳ, ರೇಷ್ಮೆ ಹುಳದಂತ ಹುಳು ಹುಪ್ಪಡಿ ಖಾದ್ಯಗಳು ಜಿಕೆವಿಕೆಯ ಕೃಷಿ ಮೇಳದಲ್ಲಿ ಪ್ರಮುಖ ಆಕರ್ಷಣೆ.

ಉತ್ತರ ಭಾರತದ ಕೆಲ ಪ್ರದೇಶಗಳ, ಚೀನಾ ಸೇರಿದಂತೆ ದೇಶ, ವಿದೇಶಗಳಲ್ಲಿ ಜನ ಈಗಾಗಲೆ ಕೆಲವು ಕೀಟಗಳನ್ನು ಬಳಸಿ ಸ್ವಾದಿಷ್ಟ ಹಾಗೂ ಆರೋಗ್ಯಯುತ ಖಾದ್ಯಗಳನ್ನು ತಯಾರಿಸಿ ಸೇವಿಸುತ್ತಿದ್ದಾರೆ. ಜನಸಂಖ್ಯೆ ಹೆಚ್ಚುತ್ತಿರುವ ಇಂದಿನ ದಿನಮಾನಗಳಲ್ಲಿ ಸುಸ್ಥಿರ ಆಹಾರ ಭದ್ರತೆಯನ್ನು ಸಾಧಿಸುವುದು ಪ್ರಸ್ತುತ ಅತಿದೊಡ್ಡ ಜಾಗತಿಕ ಸವಾಲುಗಳಲ್ಲಿ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ಕೀಟಗಳ ಸೇವನೆ (ಎಂಟೊಮೊಫಾಗಿ) ಆರೋಗ್ಯಕರ ಕಾರಣಗಳಿಗಾಗಿ ಗಮನ ಸೆಳೆಯುತ್ತಿದೆ. ಪ್ರೋಟೀನ್, ಕೊಬ್ಬು, ಖನಿಜಗಳು, ಜೀವಸತ್ವಗಳು ಮತ್ತು ನಾರಿನಂಶಗಳಲ್ಲಿ ಹೆಚ್ಚಿನ ಅಂಶವನ್ನು ಹೊಂದಿರುವ ವ್ಯಾಪಕ ಶ್ರೇಣಿಯ ಖಾದ್ಯ ಕೀಟ ಪ್ರಭೇದಗಳು ಆಹಾರ ಅಭದ್ರತೆಯನ್ನು ಪರಿಹರಿಸುವಲ್ಲಿ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎನ್ನುವ ಜಿಕೆವಿಕೆಯ ಕೀಟಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಸಂತೃಪ್ತಿ ಅವರು, ಕೀಟ ಪ್ರಪಂಚದಲ್ಲಿ ಇಡಲಾಗಿದ್ದ ವಿವಿಧ ಕೀಟಗಳಿಂದ ತಯಾರಿಸಿದ ಖಾದ್ಯಗಳನ್ನು ಪರಿಚಯಿಸಿದರು.

13 ಬಗೆಯ ಖಾದ್ಯಗಳು: ಪ್ರದರ್ಶನಕ್ಕೆ ಇಟ್ಟಿದ್ದ ಮೀಲ್ವರಂ ಪಿಜ್ಜಾ, ಕಣಜ ಹುಳುವಿನ ಮಸಾಲ, ಮಿಡತೆ ಫ್ರೈ, ರೇಷ್ಮೆಹುಳು ಕೋಶದ ಚಾಕಲೇಟ್, ಚಿಗಳೆ ಚಟ್ನಿ, ಮಿಡತೆ ಕಬಾಬ್, ಎರಿ ರೇಷ್ಮೆ ಹುಳುವಿನ ಬಾರ್ಬಿಕ್ಯೂ, ಮೀಲ್ವರಂ ಫ್ರೈಡ್‌ರೈಸ್, ರೇಷ್ಮೆಹುಳು ಕೋಶದ ಸೂಪ್, ಮಿಲ್ವರಂ ಕೇಕ್, ರಾಣಿ ಗೆದ್ದಲಿನ ಬರ್ಗರ್, ಜಿರಳೆ ಪಕೋಡ, ಬೇರು ಹುಳುವಿನ ಬಾರ್ಬಿಕ್ಯೂ, ರೇಷ್ಮೆ ಹುಳು ಕೋಶದ ಮಂಚೂರಿಯನ್ ನೋಡಿ ಬಾಯಲ್ಲಿ ನೀರೂರಿಸಿದವರಿಗಿಂತ, ಮುಖ ಸಿಂಡರಿಸಿದವರೇ ಹೆಚ್ಚು. ಆದರೂ ಭವಿಷ್ಯದಲ್ಲಿ ಆಹಾರ ಅಭದ್ರತೆಯನ್ನು ಪರಿಹರಿಸಬಲ್ಲ, ಕೀಟಗಳಿಂದ ತಯಾರಿಸಿದ ವಿವಿಧ ಖಾದ್ಯಗಳನ್ನು ಹಲವರು ಬಹಳ ಕುತೂಹಲದಿಂದಲೇ ಪರಿಶೀಲಿಸಿ, ಕೀಟ ಶಾಸ್ತ್ರದ ವಿದ್ಯಾರ್ಥಿನಿ ವೈಷ್ಣವಿ ಅವರಿಂದ ಮಾಹಿತಿ ಪಡೆಯುತ್ತಿದ್ದ ದೃಶ್ಯ ಕಂಡುಬಂತು.



ಕೀಟಗಳನ್ನು ಬಳಸಿ 16 ಬಗೆಯ ಖಾದ್ಯಗಳನ್ನು ಮಾಡಿದ್ದೇವೆ. ಕೀಟಗಳಲ್ಲಿ ಒಳ್ಳೆಯ ಪ್ರೋಟೀನ್ ಇದೆ. ಕೆಟ್ಟಕೊಬ್ಬು ಕಡಿಮೆ ಇರುತ್ತದೆ. ಹೇಗೆ ಬೇರೆ ದೇಶಗಳಲ್ಲಿ ಆಹಾರಕ್ಕೆ ಪರ್ಯಾಯವಾಗಿ ಕೀಟಗಳ ಖಾದ್ಯ ಬಳಸುತ್ತಿದ್ದಾರೋ ಹಾಗೆಯೇ ಭವಿಷ್ಯದಲ್ಲಿ ಇಲ್ಲಿಯೂ ಜನರು ಬಳಸಬಹುದಾಗಿದೆ.
• ಹರ್ಷಿಣಿ ಎಂಎಸ್ಸಿ ಕೀಟಶಾಸ್ತ್ರ ವಿಭಾಗ, ಜಿಕೆವಿಕೆ

ಪರ್ಯಾಯ ಆಹಾರ!: ಖಾದ್ಯ ಕೀಟಗಳಕ್ಕಾಲೋರಿ ಹೆಚ್ಚು ಪೌಷ್ಟಿಕವಾಗಿರುವುದರಿಂದ, ಅವುಗಳ ಸೇವನೆ ವಿಶ್ವಾದ್ಯಂತ ಕ್ಷಾಮವನ್ನು ಕಡಿಮೆ ಮಾಡುವ ಸಾಮರ್ಥ್ಯಹೊಂದಿದೆ ಎನ್ನುತ್ತಾರೆ ಕೀಟಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು.

1.50 ಲಕ್ಷ ಜನರ ಭೇಟಿ



ನ.13ರಿಂದ ನಾಲ್ಕು ದಿನಗಳ ಕಾಲ ಜಿಕೆವಿಕೆ ಆವರಣದಲ್ಲಿ ನಡೆಯಲಿರುವ ಕೃಷಿ ಮೇಳಕ್ಕೆ ಮೊದಲ ದಿನವೇ ರೈತರು, ಸಾರ್ವಜನಿಕರಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಬರೋಬ್ಬರಿ 1.50 ಲಕ್ಷಕ್ಕೂ ಹೆಚ್ಚು ಜನರು ಮೇಳಕ್ಕೆ ಆಗಮಿಸಿದ್ದರು. 11 ಸಾವಿರ ಜನರು ಕೃಷಿವಿವಿಯರಿಯಾಯಿತಿಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಸವಿದರು. 62 ಲಕ್ಷ ರು.ಗಳ ವಹಿವಾಟು ನಡೆದಿದೆ ಎಂದು ಕೃಷಿ ವಿವಿಯು ಮಾಹಿತಿ ನೀಡಿದೆ.



ಜಿಕೆವಿಕೆ ಕೃಷಿ ಮೇಳದಲ್ಲಿ ಸೂರ್ಯಕಾಂತಿ ತಳಿ ನಡುವೆ ಸಾರ್ವಜನಿಕರು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಕೃಷಿ ಮೇಳಕ್ಕೆ ಚಾಲನೆ ನೀಡಿ, ಕೃಷಿ ಸಚಿವ ಚಲುವರಾಯಸ್ವಾಮಿ ಕರೆ

ರೈತರು ಉದ್ಯಮಿಗಳಾಗಿ ಬಲವರ್ಧನೆಗೊಳ್ಳಲಿ

ಬೆಂಗಳೂರು: ಕಡಿಮೆ ವೆಚ್ಚದಲ್ಲಿ ಉತ್ತಮ ಇಳುವರಿ ಮತ್ತು ಆದಾಯ ನೀಡುವ ಬೆಳೆಗಳನ್ನು ನೀಡುವ ಉದ್ದೇಶದಿಂದ ಇಂತಹ ಕೃಷಿ ಮೇಳಗಳನ್ನು ಆಯೋಜಿಸಲಾಗಿದ್ದು, ಇದನ್ನು ಬಳಸಿಕೊಂಡು ರೈತರು ಉದ್ಯಮಿಗಳಾಗಿ ಬಲವರ್ಧನೆಗೊಳ್ಳಬೇಕು ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಕರೆ ನೀಡಿದರು.



ಜಿಕೆವಿಕೆ ಕೃಷಿ ವಿಶ್ವವಿದ್ಯಾನಿಲಯವು ಸಮೃದ್ಧ ಕೃಷಿ –ವಿಕಸಿತ ಭಾರತ ನೆಲ, ಜಲ ಮತ್ತು ಬೆಳೆ ಶೀರ್ಷಿಕೆಯಲ್ಲಿ ಹಮ್ಮಿಕೊಂಡಿರುವ ಬಹು ನಿರಿಕ್ಷೀತ ಕೃಷಿ ಮೇಳಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಕೃಷಿಯನ್ನು ಉದ್ದಿಮೆಯಾಗಿ ಪರಿವರ್ತಿಸಿ ರೈತರಿಗೆ ಉತ್ತಮ ಆದಾಯ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಸೌಲಭ್ಯಗಳು ಹಾಗೂ ಕಾರ್ಯಕ್ರಮಗಳನ್ನು ನೀಡುತ್ತಿವೆ. ರೈತರ ಬೆಲೆಗಳಿಗೆ ನ್ಯಾಯಯುತ ಬೆಲೆ, ಸೂಕ್ತ ಮಾರುಕಟ್ಟೆ ವ್ಯವಸ್ಥೆ ಜತೆಗೆ ಸಂಶೋಧನೆಗಳ ವೈಜ್ಞಾನಿಕ ಅನುಷ್ಠಾನ, ಬರ ನಿರ್ವಹಣೆ ಮಾಡಿದಾಗ ಮಾತ್ರ ಸುಸ್ಥಿರ ಕೃಷಿ ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ವಿವಿ ಕುಲಪತಿ ಎಸ್.ವಿ. ಸುರೇಶ್, ಕುಲಸಚಿವ ನಾರಯಣಸ್ವಾಮಿ, ಆಡಳಿತ ಮಂಡಳಿ ಸದಸ್ಯ ಡಾ. ಟಿ.ಕೆ.ಪ್ರಭಾಕರ ಶೆಟ್ಟಿ, ಡಾ.ಎಚ್.ಎಲ್. ಹರೀಶ್, ಬಿ.ಎಸ್. ಉಲ್ಲಾಸ್, ಡಾ. ವೈ.ಎನ್. ಶಿವಲಿಂಗಯ್ಯ ದಿನೇಶ್ ಸೇರಿದಂತೆ ಇತರರಿದ್ದರು.

ಪುಟ 2



₹62 ಲಕ್ಷಕ್ಕೂ ಅಧಿಕ ವಹಿವಾಟು

ಕೃಷಿ ಮೇಳದ ಮೊದಲನೆ ದಿನದಂದು 8.51 ಲಕ್ಷ ರೈತರು/ಸಾರ್ವಜನಿಕರು ಭಾಗವಹಿಸಿದ್ದು, ಸುಮಾರು 11 ಸಾವಿರ ಜನ ಕೃಷಿ ವಿಶ್ವವಿದ್ಯಾನಿಲಯದ ರಿಯಾಯಿತಿ ದರದ ಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಮಾಡಿದರು. 62 ಲಕ್ಷ ರೂ. ಆರ್ಥಿಕ ವಹಿವಾಟು ನಡೆಸಲಾಗಿದೆ. ಈ ಕೃಷಿ ಮೇಳವು ನ.16ರವರೆಗೆ ನಡೆಯಲಿದೆ.

ಕೃಷಿ ಮೇಳಕ್ಕೆ ವಿದ್ಯುಕ್ತ ಚಾಲನೆ | ವಿವಿಧ ತಳಿಯ ಸಿರಿಧಾನ್ಯ, ಅಲಂಕಾರಿಕ ವಸ್ತುಗಳ ಪ್ರದರ್ಶನ

ಬಹುಬಗೆಯ ಕೃಷಿ ಉಪಕರಣಗಳ ಅನಾವರಣ

• **ಬೆಂಗಳೂರು:** ಜಿಕೆವಿಕೆ ಕೃಷಿ ವಿಶ್ವವಿದ್ಯಾನಿಲಯವು ಸಮೃದ್ಧ ಕೃಷಿ -ವಿಕಸಿತ ಭಾರತ ನೆಲ,ಜಲ ಮತ್ತು ಬೆಳೆ ಶೀರ್ಷಿಕೆಯಲ್ಲಿ ಹಮ್ಮಿಕೊಂಡಿರುವ ಬಹುನಿರೀಕ್ಷಿತ ಕೃಷಿ ಮೇಳಕ್ಕೆ ಗುರುವಾರದಂದು ಅದ್ದೂರಿಯಾಗಿ ಚಾಲನೆ ನೀಡಲಾಯಿತು.

ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಕೃಷಿ ಸಂಬಂಧಿಸಿದ ಯತ್ರೋಪಕರಣ, ಹೂ, ಹಣ್ಣು ಹಾಗೂ ತರಕಾರಿ ತಳಿ, ಸಿರಿಧಾನ್ಯದಿಂದ ತಯಾರಿಸಿದ ರಂಗೋಲಿ, ಸಿರಿಧಾನ್ಯ ಮನೆ, ಸಿರಿಧಾನ್ಯದಿಂದ ತಯಾರಿಸಿದ ಬಿಸ್ಕೇಟ್, ಐಸ್‌ಕ್ರೀಮ್, ಬೋಟಿ, ಇತರ ಖಾದ್ಯಗಳು, ಆಡುಗೆ ಎಣ್ಣೆ, ಅಲಂಕಾರಿಕ ವಸ್ತುಗಳು, ಬೀಜ ಸಂತೆ, ರೇಷ್ಮೆ ಕೃಷಿ, ಜಲಾನಯ ನಿರ್ವಹಣೆ ಕುರಿತು ಮಾಹಿತಿ, ಮಣ್ಣು ರಹಿತ ಕೃಷಿ ಮಾಡುವ ವಿಧಾನ ಹಾಗೂ ಬೆಳೆಗಳು, ಕೃಷಿಯಲ್ಲಿ ನೂತನ ತಂತ್ರಜ್ಞಾನದ ಕುರಿತು ಮಾಹಿತಿ ಹಾಗೂ ಹೊಸದಾಗಿ ಬಿಡುಗಡೆಗೊಳಿಸಿದ ತಂತ್ರಜ್ಞಾನ ಕುರಿತು ಮಾಹಿತಿ ನೀಡಲಾಯಿತು.

ಜರ್ಮನ್ ಗ್ರೇ ಜೈಂಟ್ ರಾಬಿಟ್: ಫ್ಲೆಮಿಶ್ ದೈತ್ಯ (Flemish Giant) ಅಥವಾ ಕಾಸ್ಟಿನೆನ್ (Kostinshen). ಇದು ದೊಡ್ಡ ಮೊಲದ ತಳಿ, ಮತ್ತು ಜರ್ಮನ್ ಗ್ರೇ ಜೈಂಟ್ ರಾಬಿಟ್ ಎಂದು ಕರೆಯಲ್ಪಡುತ್ತದೆ.

ಗಾತ್ರ: ಇದರ ತೂಕ ಸುಮಾರು 14-20 ಪೌಂಡುಗಳು (6.3-9 ಕೆ.ಜಿ) ಮತ್ತು ಉದ್ದ ಸುಮಾರು 2.5 ಅಡಿಗಳವರೆಗೆ ಬೆಳೆಯುತ್ತದೆ.

ಸ್ವಭಾವ: ಇದು ಶಾಂತ ಮತ್ತು ಸ್ನೇಹಪರ ಸ್ವಭಾವವನ್ನು ಹೊಂದಿದೆ. ಇದು ನಾಯಿಗಳಂತೆ ವರ್ತಿಸುತ್ತದೆ ಮತ್ತು ಮಾಲೀಕರ ಜೊತೆ ಆಟವಾಡಲು ಇಷ್ಟಪಡುತ್ತದೆ.

ಆಹಾರ: ಈ ಮೊಲಗಳಿಗೆ ಹುಲ್ಲು, ಹಸಿರೆಲೆಗಳು ಮತ್ತು ವಿಶೇಷ ಮೊಲದ ಆಹಾರದ ಅವಶ್ಯಕತೆಯಿದೆ.

ಪ್ರಮುಖ ಅಂಶಗಳು: ಇವುಗಳ ಗಾತ್ರ ದೊಡ್ಡದಾಗಿರುವುದರಿಂದ, ಇವುಗಳಿಗೆ ದೊಡ್ಡ ಜಾಗ, ದೊಡ್ಡ ಆಹಾರ ಮತ್ತು ದೊಡ್ಡ ತಾಲೀಮು ಅಗತ್ಯ.



> ಎರಡನೇ ಬಾರಿ ಕೃಷಿ ಮೇಳಕ್ಕೆ ಭೇಟಿ ನೀಡುತ್ತಿದ್ದು, ಕೃಷಿಗೆ ಬೇಕಾದಂತಹ ಮಾರ್ಗದರ್ಶನ ಹಾಗೂ ತಂತ್ರಜ್ಞಾನ ಎರಡು ಒಂದೇ ಸೂರಿನಡಿ ಲಭ್ಯವಾಗುತ್ತಿದೆ.
> ■ ಯಶಸ್ವಿನಿ, ರೈತ ಮಹಿಳೆ ಮಂಡ್ಯ

ವಿವಿಧ ತಳಿಗಳು

ಪಶುಸಂಗೋಪನೆ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ತಳಿಯ ಪ್ರಾಣಿಗಳ ಪ್ರದರ್ಶನ ನೋಡಲು ರೈತರು ಮುಗಿಬಿದ್ದಿದ್ದರು, ಆದರಲ್ಲಿ ಪ್ರಮುಖವಾಗಿ ಹಸುಗಳು, ಮೊಲ, ಮೇಕೆ ಹೀಗೆ ಹತ್ತಾರು ಪ್ರಾಣಿಗಳ ಬಗ್ಗೆ ರೈತ ಮಾಹಿತಿ ಪಡೆದರು.ಇದರೊಂದಿಗೆ ವಿವಿಧ ರೀತಿಯ ಕೋಳಿಗಳು, ಮೀನುಗಳು ನೋಡುಗರನ್ನು ಮೇಳದಲ್ಲಿ ಕೈ ಬೀಸಿ ಕರೆದವು.



ವಿಶ್ವದ ಅತ್ಯಂತ ಚಿಕ್ಕಹಸು

ವಿಶ್ವದ ಅತ್ಯಂತ ಚಿಕ್ಕ ಹಸು ಎಂಬ ಖ್ಯಾತಿ ಪಡೆದಿರುವ ಪುಂಗನೂರು ತಳಿ ಮೇಳದಲ್ಲಿ ಎಲ್ಲರ ಗಮನ ಸೆಳೆಯಿತು. ಈ ಹಸುವನ್ನು ಮನೆಯ ಒಳಗೆ ಸಾಕಬಹುದಾಗಿದ್ದು, ಇದು ಕೇವಲ ಎತ್ತರ ಕಮ್ಮಿ ಎನ್ನುವುದಕ್ಕಿಂದ ಇದರ ಹಾಲಿನಲ್ಲಿ ಹಲವು ಬಗೆಯ ಔಷಧೀಯ ಗುಣಗಳಿದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ಈ ಹಸುವಿನ ಮೂಲವಾಗಿದ್ದು, ಜೋಡಿ ಹಸುವಿಗೆ 2.5 ಲಕ್ಷ ರೂ. ಬೆಲೆ ಇರುತ್ತದೆ.



50ರೂ.ಗೆ ಮುದ್ದೆ ಊಟ

ಗುರುವಾರ ಮಧ್ಯಾಹ್ನದ ಊಟಕ್ಕೆ ರಾಗಿ ಮುದ್ದೆ, ಅವರೆಕಾಳು ಸಾರು, ಜಿಲೇಬಿ, ಮೊಟ್ಟೆ, ಹುರುಳಿಕಾಯಿ ಪಲ್ಯ, ಮೊಸರನ್ನ ಒಳಗೊಂಡ ಬಿಸಿ ಬಿಸಿಯಾದ ಊಟ ಬಡಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಹಲವು ಸಿಬ್ಬಂದಿ ಖುಷಿಯಿಂದ ಊಟ ಬಡಿಸುವಲ್ಲಿ ತೊಡಗಿದ್ದರು.

ನೆಟ್‌ವರ್ಕ್ ಸಮಸ್ಯೆ

ಕೃಷಿ ಮೇಳದಲ್ಲಿ ನೆಟ್‌ವರ್ಕ್ ಸಮಸ್ಯೆ ಉಂಟಾಗಿದ್ದು, ಮೊದಲ ದಿನವೇ ಯಾವುದೇ ಫೋನ್ ಕರೆಗಳು ಕರೆ ಮಾಡಲಾಗದೆ, ಕೃಷಿ ಪರಿಕರಗಳನ್ನು ಖರೀದಿಸಿದರೆ ಆನ್‌ಲೈನ್ (ಫೋನ್‌ಪೇ, ಗೂಗಲ್ ಪೇ)ನಲ್ಲಿ ಹಣ ಪಾವತಿಸಲು ಆಗದೆ ಸಾರ್ವಜನಿಕರಿಗೆ ತುಂಬಾ ಸಮಸ್ಯೆಯಾಯಿತು.

Hosadigantha Pg.02,11

ಕೃಷಿ ಮೇಳಕ್ಕೆ ರೈತರು, ವಿದ್ಯಾರ್ಥಿಗಳ ದಂಡು

ಗಮನ ಸೆಳೆದ ಫಲಪುಷ್ಪ ಪ್ರದರ್ಶನ
ಒಂದೇ ಸೂರಿನಡಿ ಬಗೆ ಬಗೆಯ ಆಲಂಕಾರಿಕ ಮೀನುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಮೊದಲ ದಿನವಾದ ಗುರುವಾರ ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರೈತರಿಗಾಗಿ ಈ ಬಾರಿ ಧಾನ್ಯ ಜೋಳ (ಸಿಎನ್‌ಜಿಎಸ್-1), ಸೂರ್ಯಕಾಂತಿ (ಕೆಬಿಎಸ್‌ಎಚ್-88) ಹರಳು (ಬಿಸಿಎಚ್-162), ಕಪ್ಪು ಅರಿಶಿಣ (ಸಿಎಚ್‌ಎನ್‌ಬಿಟಿ-1) ಹಾಗೂ ಅರಿಶಿಣ (ಐಐಎಸ್‌ಆರ್ ಪ್ರಭಾ) ಎಂಬ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಈ ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರು, ವಿದ್ಯಾರ್ಥಿಗಳು ಭೇಟಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಅಂಕಿ ಅಂಶಗಳು

8.51 ಲಕ್ಷ
ಕೃಷಿ ಮೇಳಕ್ಕೆ ಭೇಟಿ ನೀಡಿದ ಜನರು

11,086
ರಿಯಾಯಿತಿ ದರದ ಭೋಜನ ಸವಿದವರು

₹62 ಲಕ್ಷ
ಕೃಷಿ ಮೇಳದಲ್ಲಿ ನಡೆದಿರುವ ವಹಿವಾಟು

ಮೇಳಕ್ಕೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಜಿಕೆವಿಕೆ ಆವರಣದಲ್ಲಿ ಬೆಳೆದಿರುವ ಆಕರ್ಷಕ ಸೂರ್ಯಕಾಂತಿಯ ತಾಕುಗಳಲ್ಲಿ ನಿಂತುಕೊಂಡು ಸೆಲ್ಫಿಗೆ ಪೋಸ್ ನೀಡುತ್ತಿದ್ದರೆ, ಇತ್ತ ರೈತರು ಕೃಷಿಯಲ್ಲಿನ ಹೊಸ ತಂತ್ರಜ್ಞಾನದ ಹುಡುಕಾಟದಲ್ಲಿ ನಿರತರಾಗಿದ್ದರು.

ಒಂದೇ ಸೂರಿನಡಿ ಆಲಂಕಾರಿಕ ಮೀನುಗಳ ಪ್ರದರ್ಶನ ಮತ್ತು ಮಾರಾಟ, ಹತ್ತಾರು ತಳಿಗಳ ಹಸು, ದನಗಳು. ಕುರಿ, ಮೇಕೆ ಹಾಗೂ ಕೋಳಿಗಳನ್ನು ನೋಡಲು ಶಾಲಾ-ಕಾಲೇಜಿನ ಮಕ್ಕಳು ಸೇರಿದಂತೆ ಸಾರ್ವಜನಿಕರು ಮುಗಿಬಿದ್ದಿದ್ದರು.

ಫಲಪುಷ್ಪ ಪ್ರದರ್ಶನದಲ್ಲಿ ಬಗೆಬಗೆಯ ಹೂವುಗಳಿಂದ ರೂಪಿಸಿರುವ ಆನೆ, ಕಡವೆ, ಮೀನು, ಟಗರು, ಟ್ರ್ಯಾಕ್ಟರ್ ಆಕರ್ಷಕವಾಗಿವೆ. ಕರ್ನಾಟಕ ಬಾವುಟದ ಹೂವಿನ ಅಲಂಕಾರವು ಗಮನ ಸೆಳೆಯಿತು. ತೋಟಗಾರಿಕೆ ಬೆಳೆಗಳ ಮಾಹಿತಿಯೂ ಈ ವಿಭಾಗದಲ್ಲಿದೆ.

ಜರ್ಮನ್ ಗ್ರೇ ಜೈಂಟ್ ಅಂಗೋರ್ ತಳಿಯ ಮೊಲವನ್ನು ವಿದ್ಯಾರ್ಥಿಗಳು, ಮಕ್ಕಳು ಕುತೂಹಲದಿಂದ ವೀಕ್ಷಿಸಿದರು.

'ಈ ತಳಿಯ ಮೊಲಗಳು ಜರ್ಮನಿ ದೇಶದ ಶೀತವಲಯದ ವಾತಾವರಣದಲ್ಲಿ ಮಾತ್ರ ಕಂಡು ಬರುತ್ತವೆ. ಇದನ್ನು ಸಾಕಾಣಿಕೆ ಮಾಡಬೇಕಾದರೆ ಶೀತವಲಯದ ವಾತಾವರಣ ನಿರ್ಮಿಸಬೇಕು. ಇದಕ್ಕಾಗಿ ಎ.ಸಿ ಹಾಗೂ ಫ್ಯಾನ್ ಇರಬೇಕು. ಆಹಾರ ಸೇವನೆ ಕಡಿಮೆ ಮಾಡುವುದರಿಂದ ತೂಕವೂ ಕಡಿಮೆ ಇದೆ. ಜರ್ಮನಿಯಿಂದ ಭಾರತಕ್ಕೆ ತೆಗೆದುಕೊಂಡು ಬರಲು ₹15 ಸಾವಿರ ವೆಚ್ಚ ಮಾಡಿದ್ದೇನೆ. ₹16 ಸಾವಿರದಿಂದ ₹18 ಸಾವಿರ ಬೆಲೆ ಬಂದರೆ ಮಾರಾಟ ಮಾಡುತ್ತೇನೆ' ಎಂದು ರೈತ ಚಂದನ್ ತಿಳಿಸಿದರು.



ಜರ್ಮನ್ ಗ್ರೇ ಜೈಂಟ್ ಅಂಗೋರ್ ತಳಿಯ ಮೊಲ



ಕೃಷಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಪ್ರಗತಿಪರ ರೈತರಾದ ಎಲ್.ವಿ.ಶಿವರಾಜು, ವದ್ದಿನಿ ಆವರಿಗೆ ಕೆನರಾ ಬ್ಯಾಂಕ್ ಪ್ರಶಸ್ತಿ, ಎಂ.ಎಸ್.ರವಿಶಂಕರ್ ಆವರಿಗೆ ಎಚ್.ಡಿ.ದೇವೇಗೌಡ ವಶಸ್ತಿ ಪ್ರದಾನ ಮಾಡಲಾಯಿತು. ಶೋಭಾ ಕರಂದ್ಲಾಜೆ, ಎನ್. ಚಲುವರಾಯಸ್ವಾಮಿ, ಎಸ್. ಸೆಲ್ವಕುಮಾರ್, ಎಸ್.ವಿ.ಸುರೇಶ್ ಉಪಸ್ಥಿತರಿದ್ದರು

ಮೇಳ ಉದ್ಘಾಟಿಸಿದ ಚಲುವರಾಯಸ್ವಾಮಿ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಕೃಷಿ ಮೇಳವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಗುರುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಲ್ಯಾಬ್ ಟು ಲ್ಯಾಂಡ್' ಘೋಷ ವಾಕ್ಯದಡಿಯಲ್ಲಿ ವಿಜ್ಞಾನಿಗಳ ಶ್ರಮ ಮತ್ತು ರೈತರ ಅನುಭವ ಒಟ್ಟಿಗೆ ಸೇರಿದಾಗ ಕೃಷಿ ಕ್ರಾಂತಿಯಾಗಲಿದೆ. ಇಂತಹ ವೈಶಿಷ್ಟ್ಯಗಳಿಗೆ ಈ ಕೃಷಿ ಮೇಳ ಸಾಕ್ಷಿಯಾಗಿದೆ. ಹವಾಮಾನ ಬದಲಾವಣೆ, ನೀರಿನ ಕೊರತೆ ದೊಡ್ಡ ಸವಾಲುಗಳಾಗಿದ್ದು, ಇವುಗಳನ್ನು ನಾವು ವೈಜ್ಞಾನಿಕವಾಗಿ ಎದುರಿಸಲು ಸಜ್ಜಾಗಬೇಕು' ಎಂದು ಕರೆ ನೀಡಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್, ಕುಲಸಚಿವ ನಾರಾಯಣಸ್ವಾಮಿ, ಆಡಳಿತ ಮಂಡಳಿ ಸದಸ್ಯರಾದ ಟಿ.ಕೆ. ಪ್ರಭಾಕರ ಶೆಟ್ಟಿ, ಎಚ್.ಎಲ್. ಹರೀಶ್, ಬಿ.ಎಸ್. ಉಲ್ಲಾಸ್, ವೈ.ಎನ್. ಶಿವಲಿಂಗಯ್ಯ ದಿನೇಶ್ ಹಾಗೂ ಎಂ. ಚಂದ್ರೇಗೌಡ ಹಾಜರಿದ್ದರು.

Prajavani Pg.02

ಜಿರಳೆ ಪಕೋಡ, ಗೆದ್ದಲು ಬರ್ಗರ್

ಬೆಂಗಳೂರು ಕೃಷಿ ವಿವಿ: ಮೇಳದಲ್ಲಿ ಗಮನ ಸೆಳೆದ ಹೊಸ ಬಗೆಯ ತಿನಿಸು, ಕೀಟ ವಿಸ್ಮಯ

• ಖಲೀಲಅಹ್ಮದ ಶೇಖ



ಜಿರಳೆ ಪಕೋಡ



ರೇಷ್ಮೆ ಹುಳುವಿನ ಸೂಪ್



ಮೀಲ್ವರಂ ಕೇಕ್



ಮೀಲ್ವರಂ ಪಿಜ್ಜಾ



ರೇಷ್ಮೆ ಹುಳುವಿನ ಕಬಾಬ್

ಬೆಂಗಳೂರು: ಜಿರಳೆ ಪಕೋಡ, ಚಿಗಳಿ ಚಟ್ನಿ, ರೇಷ್ಮೆ ಹುಳು ಕೋಶದ ಸೂಪ್ ಹಾಗೂ ಮಂಚೂರಿ, ರೇಷ್ಮೆ ಹುಳುವಿನ ಬಾರ್ಬಿಕ್ಯೂ, ಕಬಾಬ್, ಮೀಲ್ವರಂ ಕೇಕ್-ಫ್ರೈಡ್ ರೈಸ್, ರಾಣಿ ಗೆದ್ದಲಿನ ಬರ್ಗರ್ ಆಹಾ ಹೊಸ ಬಗೆಯ ತಿನಿಸುಗಳು...

ಇಂತಹ ವೈವಿಧ್ಯಮಯ, ನೋಡುಗರಲ್ಲಿ ಬೆರಗು ಹುಟ್ಟಿಸುವ ಆಹಾರ ಪದಾರ್ಥಗಳು ಒಂದೆಡೆ ಕಾಣಸಿಕ್ಕಿದ್ದು ಕೃಷಿಮೇಳದಲ್ಲಿ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಮೇಳದಲ್ಲಿ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ತಯಾರಿಸಿದ್ದ ಇಂತಹ ತಿನಿಸುಗಳು ಎಲ್ಲರ ಗಮನ ಸೆಳೆದವು.

ಕಣಜದ ಮಸಾಲಾ, ಮಿಡತೆ ಫ್ರೈ ಹಾಗೂ ಕಬಾಬ್ ಸೇರಿದಂತೆ ನಾನಾ ರೀತಿಯ ಕೀಟಗಳ ತಿನಿಸುಗಳು, ಬೇಕರಿ ಪದಾರ್ಥಗಳು, ಫಾಸ್ಟ್‌ಫುಡ್‌ಗಳೂ ಪ್ರದರ್ಶನದಲ್ಲಿವೆ. ಈ ಆಹಾರ ಪದಾರ್ಥಗಳ ಮಹತ್ವ, ಇದರಲ್ಲಿರುವ ಪೌಷ್ಟಿಕಾಂಶಗಳ ಬಗ್ಗೆ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ರೈತರಿಗೆ, ಜನ ಸಾಮಾನ್ಯರಿಗೆ, ವಿಜ್ಞಾನಿಗಳಿಗೆ, ಪರಿಸರ ಪ್ರಿಯರಿಗೆ, ಕೀಟಗಳೊಂದಿಗೆ ನಂಟು ಹೊಂದಿರುವ ಹವ್ಯಾಸಿಗಳಿಗೆ ಹಾಗೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಒದಗಿಸಲು ಕೀಟ ವಿಸ್ಮಯ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

'ಈ ಪ್ರದರ್ಶನದಲ್ಲಿ ಕೀಟಗಳ ಬಗ್ಗೆ ಇದುವರೆಗೂ ತಿಳಿದಿರುವ, ತಿಳಿಯದೆ ಇರುವ ವೈಜ್ಞಾನಿಕ ಸಂಗತಿಗಳನ್ನು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಪ್ರದರ್ಶಿಸಲಾಗಿದೆ. ಜೀವ-ವೈವಿಧ್ಯತೆಗೆ ಹೆಸರಾದ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಸ್ಥಳೀಯವಾಗಿ ಹಾಗೂ ಬೇರೆ ದೇಶಗಳಲ್ಲಿ ಕಂಡುಬರುವ ಜೀವಂತ ಹಾಗೂ ಸಂರಕ್ಷಿಸಿರುವ ಸಾವಿರಾರು ಕೀಟಗಳನ್ನು ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ ಒದಗಿಸಲಾಗಿದೆ' ಎಂದರು.

'ಸೃಷ್ಟಿಯಲ್ಲಿ ಕೀಟಗಳ ಉಗಮ, ಕೀಟ ಗಳಲ್ಲಿರುವ ವೈವಿಧ್ಯತೆ, ಕೀಟಗಳ ವಿಭಿನ್ನವಾದ ಹಾಗೂ ವಿಸ್ಮಯಕಾರಿ ಜೀವನ ಚಕ್ರವನ್ನು ಇಲ್ಲಿ ತೋರಿಸಲಾಗಿದೆ. ನಮ್ಮ ದೇಶದಲ್ಲಿ ಕಂಡುಬರುವ ವಿವಿಧ ಬಗೆಯ ಪರಾಗಸ್ಪರ್ಶ ಕೀಟಗಳು, ಬೆಳೆಗಳನ್ನು ನಾಶಮಾಡುವ, ಮನುಷ್ಯರಿಗೆ ಮತ್ತು ಜಾನುವಾರುಗಳಿಗೆ ರೋಗಗಳನ್ನು ಹರಡುವ ಕೀಟಗಳು, ಮರಣ ಹೊಂದಿದ ಸಮಯವನ್ನು ನಿಖರವಾಗಿ ತಿಳಿಸಿ ಪತ್ತೇದಾರಿ ಕೆಲಸವನ್ನು ಸುಲಭವಾಗಿಸುವ ಕೀಟಗಳು, ಸಂಘ ಜೀವನ ನಡೆಸುವ ಕೀಟಗಳು, ಆಕರ್ಷಕ ಚಿಟ್ಟೆಗಳು, ಬಹುರೂಪಿ ದುಂಬಿಗಳು, ಬೆರಗುಗೊಳಿಸುವ ಜೀರುಂಡೆಗಳು, ಸೂಜಿ ಮೊನೆಯಷ್ಟು ಕಿರಿದಾದ ಹಾಗೂ ಅಂಗೈಯಷ್ಟು ಅಗಲದ ದೈತ್ಯ ಕೀಟಗಳೊಂದಿಗೆ ಅಪರೂಪದ ಕೀಟ ಸಂಕುಲಗಳ ಆಗರವನ್ನು ಇಲ್ಲಿ ವೀಕ್ಷಿಸುವುದರ ಜೊತೆಗೆ ತಜ್ಞರೊಂದಿಗೆ ಸಂವಾದ ನಡೆಸಬಹುದು' ಎಂದು ತಿಳಿಸಿದರು.





ಕೃಷಿ ಮೇಳದಲ್ಲಿ...

ಕೃಷಿ ಮೇಳ: 14ರ ಕಾರ್ಯಕ್ರಮ

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಹಮ್ಮಿಕೊಂಡಿರುವ ಕೃಷಿಮೇಳದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ತುಮಕೂರು ಜಿಲ್ಲಾ ಮಟ್ಟದ ಪ್ರಗತಿಪರ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ, ತುಮಕೂರು ತಾಲ್ಲೂಕು ಮಟ್ಟದ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ, ಅತ್ಯುತ್ತಮ ವೈಜ್ಞಾನಿಕ ಲೇಖನ ಪ್ರಶಸ್ತಿ ಪ್ರದಾನ. ಅತಿಥಿಗಳು: ಕೇಂದ್ರ ಸಚಿವ ವಿ.ಸೋಮಣ್ಣ ಉಪಸ್ಥಿತಿ: ರಾಜ್ಯ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ. ಅತಿಥಿಗಳು: ಗೃಹ ಸಚಿವ ಜಿ.ಪರಮೇಶ್ವರ, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ರಾಜ್ಯಸಭಾ ಸದಸ್ಯ ಜಗ್ಗೇಶ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಮೀನುಗಾರಿಕಾ ಸಚಿವ ಮಂಕಾಳ ಎಸ್. ವೈದ್ಯ. ಅಧ್ಯಕ್ಷತೆ: ಕೃಷಿ ವಿ.ವಿ. ಕುಲಪತಿ ಎಸ್.ವಿ.ಸುರೇಶ. ಮಧ್ಯಾಹ್ನ 2ಕ್ಕೆ.

ಮೇಳದ ಪ್ರಮುಖ ಆಕರ್ಷಣೆ

ಮಣ್ಣುರಹಿತ ಕೃಷಿ, ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಮಳೆ ಹಾಗೂ ಚಾವಣಿ ನೀರಿನ ಸಂಗ್ರಹ, ಹನಿ ಮತ್ತು ತುಂತುರು ನೀರಾವರಿ ಪದ್ಧತಿ, ಸಿರಿಧಾನ್ಯಗಳು ಮತ್ತು ಅವುಗಳ ಮಹತ್ವ ಹಾಗೂ ಇನ್ನೂ ಹಲವು.

ನವೆಂಬರ್ 15ರ ಕಾರ್ಯಕ್ರಮ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಪ್ರಗತಿಪರ ರೈತ, ರೈತ ಮಹಿಳಾ ಪ್ರಶಸ್ತಿ ಪ್ರದಾನ: ಅತಿಥಿ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉಪಸ್ಥಿತಿ: ಎನ್.ಚಲುವರಾಯಸ್ವಾಮಿ, ಅತಿಥಿಗಳು: ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ಈಶ್ವರ ಖಂಡ್ರೆ, ಎನ್.ಎಸ್.ಭೋಸರಾಜು, ದಿನೇಶ್ ಗುಂಡೂರಾವ್, ಶಿವಾನಂದ ಪಾಟೀಲ್, ಸಂಸದರಾದ ಮಲ್ಲೇಶ್ ಎಂ. ಬಾಬು, ಡಾ. ಕೆ.ಸುಧಾಕರ್, ಮಧ್ಯಾಹ್ನ 2ಕ್ಕೆ.

ನವೆಂಬರ್ 16ಕ್ಕೆ

ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ

ಅತಿಥಿ: ಮುಖ್ಯಮಂತ್ರಿ ಸಿದ್ದರಾಮಯ್ಯ. ಉಪಸ್ಥಿತಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಅಧ್ಯಕ್ಷತೆ: ಕಂದಾಯ ಸಚಿವ ಕೃಷ್ಣಬೈರೇಗೌಡ. ಮಧ್ಯಾಹ್ನ 2.30ಕ್ಕೆ

ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)

ಉದ್ಯಮವಾಗಿ ಕೃಷಿ: ಸ್ಟಾರ್ಟ್‌ಅಪ್ ಖುಷಿ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ವಿವಿಧ ವೃತ್ತಿಯಲ್ಲಿದ್ದ ಯುವಕ ಯುವತಿಯರು ನವೋದ್ಯಮದ ಅವಕಾಶಗಳನ್ನು ಬಳಸಿಕೊಂಡು ಕೃಷಿ ಉದ್ಯಮದತ್ತ ಹೊರಳಿದ್ದಾರೆ. ಗೃಹಿಣಿಯರೂ ಕೃಷಿ ಉತ್ಪನ್ನ ಆಹಾರೋದ್ಯಮದತ್ತ ಆಕರ್ಷಿತರಾಗಿದ್ದಾರೆ. ನಗರದ ಜಿಕೆವಿಕೆಯಲ್ಲಿ ಆರಂಭವಾದ ಕೃಷಿ ಮೇಳದಲ್ಲಿ ಇಂಥ ಸಾಧಕರ ಯಶೋಗಾಥೆಗಳು ಅನಾವರಣಗೊಂಡವು.

ಬೆಂಗಳೂರಿನ ಪೂಜಾ ಅವರು ಕನಕದಾಸರ 'ರಾಮಧಾನ್ಯ ಚರಿತೆ'ಯಿಂದ ಆಕರ್ಷಿತರಾಗಿ ಅದೇ ಹೆಸರಲ್ಲಿ ವಿಭಿನ್ನ ಆಹಾರ ಉತ್ಪನ್ನಗಳನ್ನು ಉತ್ಪಾದನೆ ಮಾಡುವ ಪ್ರಯೋಗ ಮಾಡಿದ್ದಾರೆ. ಹೆಚ್ಚಿನವು 'ರೆಡಿ ಟು ಈಟ್' ರೂಪದಲ್ಲಿಯೇ ಇವೆ. ಅವಲಕ್ಕಿ, ಉಪ್ಪಿಟ್ಟು, ಪೊಂಗಲ್ ಸಹಿತ ಬಗೆಬಗೆಯ ತಿಂಡಿಗಳನ್ನು ಸಿರಿಧಾನ್ಯ ಬಳಸಿಕೊಂಡು ತಯಾರಿಸಿದ್ದಾರೆ.

ಎಂಜಿನಿಯರ್ ಆಗಿದ್ದು ಲೋಕಸೇವಾ ಆಯೋಗದ ಪರೀಕ್ಷೆಗೂ ತಯಾರಿ ನಡೆಸುತ್ತಿರುವ ಪೂಜಾ, 'ಹೊಸದೇನಾದರೂ ಮಾಡಬೇಕು ಎಂಬ ಉದ್ದೇಶದಿಂದ ಸ್ನೇಹಿತರು, ಮನೆಯವರ ಸಹಕಾರ ಪಡೆದು ಆಹಾರ ಸಂಸ್ಕರಣೆ ಉದ್ಯಮ ಆಯ್ಕೆ ಮಾಡಿಕೊಳ್ಳಬೇಕು ಅನಿಸಿತು. ಇದಕ್ಕೆ ಬೇಕಾದ ತಂತ್ರಜ್ಞಾನ, ಪ್ಯಾಕೇಜಿಂಗ್ ಬಗ್ಗೆ ತರಬೇತಿ ಪಡೆದು ಮೊದಲ ಬಾರಿಗೆ ರಾಮಧಾನ್ಯ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದ್ದೇನೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

'ಜನರುಚಿಕರ ಆಹಾರ ಬಯಸುವ ಜತೆಗೆ ತತ್‌ಕ್ಷಣಕ್ಕೆ ಬಳಸುವುದಕ್ಕೆ ಇಷ್ಟಪಡುತ್ತಾರೆ. ಅಂತಹ ಆಹಾರ ಪರಿಚಯಿಸಿದ್ದೇವೆ. ಪ್ರತಿಕ್ರಿಯೆ ನೋಡಿಕೊಂಡು ಹೊಸ ಉತ್ಪನ್ನ ಬಿಡುಗಡೆ ಮಾಡುತ್ತೇವೆ' ಎಂದು ಮಾಹಿತಿ ನೀಡಿದರು.

ಖಾಸಗಿ ಉದ್ಯೋಗಿಯಾಗಿದ್ದ ಉದಯ್ ಅವರು ನೇರಳೆ ಹಣ್ಣಿನ ವಿವಿಧ ಉತ್ಪನ್ನಗಳ ಘಟಕ ಆರಂಭಿಸಿ ಉತ್ಪಾದನೆ ಶುರು ಮಾಡಿದ್ದಾರೆ. ನೇರಳೆ ಹಣ್ಣಿನ ಪೌಡರ್, ಜ್ಯೂಸ್, ಜಾಮ್, ಸ್ಕ್ವಾಷ್ ಸಹಿತ ಏಳೆಂಟು ರೀತಿಯ ಆರೋಗ್ಯಪೂರ್ಣ ಉತ್ಪನ್ನಗಳನ್ನು ತಯಾರಿಸಿದ್ದಾರೆ.

'ನೇರಳೆ ಹಣ್ಣುಕಿತ್ತ ಬಳಿಕ ಎರಡು ಮೂರು ದಿನದಲ್ಲಿ ಹಾಳಾಗುತ್ತದೆ. ಅದನ್ನು ಸಂಸ್ಕರಣೆ ಮಾಡಿ ವಿವಿಧ ರೂಪದಲ್ಲಿ ನೀಡಿದರೆ ಜನ ಇಷ್ಟಪಡಬಲ್ಲರು ಎಂದು ಇದನ್ನು ಆರಂಭಿಸಿದ್ದೇವೆ' ಎಂದು ಹೇಳಿದರು.

ವಿದೇಶದಲ್ಲಿ ಪತಿಯೊಂದಿಗೆ ಇದ್ದ ಗೃಹಿಣಿ ಸ್ಪಂದನಾ ಜಯಂತ್ ಬೆಂಗಳೂರಿಗೆ ಮರಳಿದ ಬಳಿಕ 'ತ್ವಾರಿಷ್' ಹೆಸರಿನ ಜೋಳ, ರಾಗಿ ಹಾಗೂ ಸಿರಿಧಾನ್ಯಗಳ ದೋಸೆ ಪೌಡರ್ ತಯಾರಿಸಿ ಮೊದಲ ಬಾರಿಗೆ ಕೃಷಿ ಮೇಳದಲ್ಲಿ ಪರಿಚಯಿಸಿದ್ದಾರೆ. 'ಮನೆಯಲ್ಲಿ ಅಮ್ಮ ಮಾಡುತ್ತಿದ್ದ ಅಡುಗೆಯ ರುಚಿಯನ್ನು ಜನರಿಗೆ ನೀಡಬೇಕು ಎನ್ನುವ ಉದ್ದೇಶದಿಂದ ಇಂತಹ ಪ್ರಯೋಗ ಮಾಡಿದ್ದೇನೆ' ಎಂದು ವಿವರಿಸಿದರು.

'ನವೋದ್ಯಮ ಮಾಡಿ ಮೂರ್ನಾಲ್ಕು ರೀತಿಯ ದೋಸೆ ಹಿಟ್ಟನ್ನು ಹತ್ತು ದಿನದ ಹಿಂದೆ ಮಾರುಕಟ್ಟೆಗೆ ಪರಿಚಯಿಸಿದ್ದವು. ಇನ್ನಷ್ಟು ಹಿಟ್ಟುಗಳ ಉತ್ಪನ್ನಗಳ ಪ್ರಯೋಗವೂ ನಡೆದಿದೆ' ಎಂದು ಸ್ಪಂದನಾ ತಿಳಿಸಿದರು.

ಜೇನು, ರಾಗಿ- ಜೋಳದ ಎಣ್ಣೆರಹಿತ ಬೋಟಿ, ಹಪ್ಪಳ, ಅಣಬೆಯಿಂದ ತಯಾರಿಸಿದ ಉಪ್ಪಿನಕಾಯಿ, ಬಿಸ್ಕೆಟ್, ಪೌಡರ್‌ಗಳು ಕೂಡ ನವೋದ್ಯಮದ ಅಡಿಯೇ ಆಹಾರೋತ್ಪನ್ನಗಳ ರೂಪ ಪಡೆದಿವೆ.



ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆಯೋಜಿಸಿರುವ ಕೃಷಿ ಮೇಳದಲ್ಲಿ ವಿವಿಧ ಸ್ಟಾರ್ಟ್‌ಅಪ್ ಕಂಪೆನಿಗಳು ತಮ್ಮ ಕೃಷಿ ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳನ್ನು ಮಾರಾಟಕ್ಕೆ ಇಟ್ಟಿದ್ದವು

₹10 ಲಕ್ಷದ ಎತ್ತುಗಳು

ಕೃಷಿ ಮೇಳದಲ್ಲಿ ಜೋಡಿ ಎತ್ತುಗಳ ಮೆರವಣಿಗೆ ಗಮನ ಸೆಳೆಯಿತು. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆಯ ಸಂದೀಪ್ ಮುದ್ದೇಗೌಡ ಅವರ ಎತ್ತುಗಳ ಬೆಲೆಯೇ ₹10 ಲಕ್ಷ. ಮೂರೂವರೆ ವರ್ಷ ಪ್ರಾಯದ ಹಳ್ಳಿಕಾರ್ ತಳಿಗಳು ಮುಖ್ಯರಸ್ತೆಯಲ್ಲಿ ಕ್ಯಾಟ್‌ವಾಕ್ ಮಾಡುತ್ತಿದ್ದರೆ, ಅವುಗಳೊಂದಿಗೆ ಜನ ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಮೇಳದಲ್ಲಿ ಎತ್ತುಗಳ ಮಾರಾಟವೂ ಜೋರಾಗಿತ್ತು. ಕೆಲವರು ಮೆರವಣಿಗೆಯನ್ನೂ ನಡೆಸಿದರು.

ರಾಜ್ಯ ಮೀನಿನ ಲಾಲಿತ್ಯ

ಕೃಷಿ ಮೇಳದಲ್ಲಿ ಆಕರ್ಷಿಸುತ್ತಿರುವುದು ದಶಕದ ನಂತರ ಆರಂಭಿಸಿರುವ ಮತ್ಸ್ಯಮೇಳ. ಇಲ್ಲಿ 45 ಬಗೆಯ ಅಲಂಕಾರಿಕ ಮೀನುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅದರಲ್ಲಿ 'ಕರ್ನಾಟಕ ರಾಜ್ಯ ಮೀನು' ಸ್ಥಾನ ಪಡೆದಿರುವ ಹಾಲುಗೆಂಡೆ ಮೀನು ಗಮನ ಸೆಳೆಯುತ್ತಿದೆ.

'ಮಹಷೀರ್ ಮೀನನ್ನೇ ಹೋಲುವ ಹಾಲುಗೆಂಡೆ ಮೀನು ಕಾವೇರಿ ನದಿಯಲ್ಲಿ ಹೆಚ್ಚು ಸಿಗುತ್ತದೆ. ಹಿಂದೆಯೇ ಇದನ್ನು 'ರಾಜ್ಯ ಮೀನು' ಎಂದು ಘೋಷಿಸಲಾಗಿದ್ದರೂ ಈ ಬಗ್ಗೆ ಹೆಚ್ಚಿನವರಿಗೆ ಅರಿವಿಲ್ಲ. ಈ ಮಾಹಿತಿಯನ್ನು ಜನರಿಗೆ ನೀಡುತ್ತಿದ್ದೇವೆ' ಎಂದು ಕೃಷಿ ವಿಶ್ವವಿದ್ಯಾಲಯದ ಒಳನಾಡು ಮೀನುಗಾರಿಕೆ ಘಟಕದ ಮುಖ್ಯಸ್ಥ ಹರ್ಷ ನಾಯಕ್ ತಿಳಿಸಿದರು.

ತರಹೇವಾರಿ ಬಾಳೆ ತಳಿ

'ಹಿಂದೆ 800ಕ್ಕೂ ಅಧಿಕ ಬಾಳೆ ತಳಿಗಳನ್ನು ನಮ್ಮಲ್ಲಿ ಬೆಳೆಯಲಾಗುತ್ತಿತ್ತು. ಈಗ ಬಹುತೇಕ ತಳಿಗಳು ಅಳಿದುಹೋಗಿದ್ದು, 300 ತಳಿಗಳನ್ನು ದಕ್ಷಿಣ ಭಾರತದಲ್ಲಿ ಬೆಳೆಯಲಾಗುತ್ತಿದೆ. ಇದರಲ್ಲಿ 100ರಷ್ಟು ಬಳಕೆಯಲ್ಲಿವೆ. ಕೃಷಿ ಮೇಳದಲ್ಲಿ ಬಾಳೆಯ ವೈವಿಧ್ಯಮಯ ಜಗತ್ತನ್ನು ನೋಡಿ ಖುಷಿಪಡಬಹುದು. 20 ಅಡಿ ಉದ್ದನೆಯ ಶಾಸ್ತ್ರಬಾಳೆ ಗಮನ ಸೆಳೆಯುತ್ತಿದೆ. ಬೂದುಬಾಳೆ, ಕರ್ಪೂರವಲ್ಲಿ ಬಾಳೆ, ಚಿರಾಪುಂಜಿ, ನಮಸ್ತೆ ಬಾಳೆ, ಚಂದ್ರಬಾಳೆ, ರಸಥಾಳಿ, ಆಟುಕೊಂಬಟ್ಟು, ಫಿಂಗರ್ಸ್ ಬಾಳೆ, ಪೂವನ ಬಾಳೆ ಅಲ್ಲಿವೆ.

'ಸಹಜ ಸಮೃದ್ಧ ಸಂಸ್ಥೆಯು ಬಾಳೆ ತಳಿಗಳನ್ನು ಸಂಗ್ರಹಿಸಿ ಪ್ರದರ್ಶನ ಏರ್ಪಡಿಸುತ್ತಿದೆ. ಈಗಲೂ ಹಲವು ತಳಿಗಳ ಉತ್ಪಾದನೆ ಇದೆ. ಒಂದೊಂದು ಬಾಳೆಯ ರುಚಿ ಒಂದೊಂದು ರೀತಿ' ಎಂದು ಸಂಸ್ಥೆಯ ಅಭಿ ಹೇಳಿದರು.

Prajavani Pg.spl02

ಮಧ್ಯ ಏಷ್ಯಾ ದೇಶಗಳಿಗೆ ಶೀಘ್ರ ಆಹಾರ ಉತ್ಪನ್ನರಫ್ತು

ಕೇಂದ್ರ ಸಚಿವೆ ಶೋಭಾ ಮಾಹಿತಿ | ಹೆಬ್ಬಾಳ ಜಿಕೆವಿಕೆಯ 4 ದಿನ ಕೃಷಿ ಮೇಳಕ್ಕೆ ಚಾಲನೆ | ಸಾಧಕರಿಗೆ ಪ್ರಶಸ್ತಿ ಪ್ರದಾನ

ಸಂ.ಕ.ಸಮಾಚಾರ, ಬೆಂಗಳೂರು

ಮಧ್ಯ ಏಷ್ಯಾ ದೇಶಗಳಿಗೆ ಆಹಾರ ಉತ್ಪನ್ನಗಳನ್ನು ರಫ್ತು ಮಾಡಲು ಶೀಘ್ರವೇ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಹೆಬ್ಬಾಳದ ಜಿಕೆವಿಕೆಯ ಕೃಷಿ ವಿಶ್ವವಿದ್ಯಾಲಯದಲ್ಲಿ ನಾಲ್ಕು ದಿನಗಳ ಕೃಷಿ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಧ್ಯ ಏಷ್ಯಾ ರಾಷ್ಟ್ರಗಳು ಸೀಮಿತ ಬೆಳೆಗಳನ್ನು ಮಾತ್ರ ಬೆಳೆಯುವುದರಿಂದ ನಮ್ಮಲ್ಲಿನ ಆಹಾರ ಉತ್ಪನ್ನಗಳು ಅವರಿಗೆ ಅನಿವಾರ್ಯವಾಗಿವೆ. ಹಾಗಾಗಿ ರಫ್ತು ಮಾಡಲೇಬೇಕಾಗಿದೆ ಎಂದರು. ಮಧ್ಯ ಏಷ್ಯಾ ರಾಷ್ಟ್ರಗಳಿಗೆ ಕೃಷಿ ಉತ್ಪನ್ನಗಳು ಸೇರಿ ಪ್ರಮುಖ ಆಹಾರ ಸಿದ್ಧ ಉತ್ಪನ್ನಗಳನ್ನು ರಫ್ತು ಮಾಡಲು ಮುಂದಾಗುತ್ತೇವೆ ಎಂದು ತಿಳಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೃಷಿ ಮತ್ತು ಇದನ್ನು ಅಲಂಬಿಸಿದ ಕ್ಷೇತ್ರಗಳತ್ತ ಸಾಕಷ್ಟು ಯುವ ಸಮೂಹ ದಾಪುಗಾಲಿಡುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಐಟಿ-ಬಿಟಿ ಮತ್ತು ಇನ್ನಿತರ ಡಿಜಿಟಲ್ ಕ್ಷೇತ್ರದಲ್ಲಿ ಉದ್ಯೋಗಿಕ ವಲಯದಲ್ಲಿ ಇರುವವರು ಕೂಡ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಮುಂದಾಗುತ್ತಿರುವುದು ಕ್ಷೇತ್ರದ ಬೆಳವಣಿಗೆಗೆ ಸಾಕ್ಷಿ ಎಂದರು.

ಕೃಷಿ ಮೇಳದಲ್ಲಿ 700 ಮಳಿಗೆ: ಕೃಷಿಮೇಳದಲ್ಲಿ 750ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕೃಷಿ , ಕೃಷಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಬಿತ್ತನೆ ಬೀಜ, ಯಂತ್ರೋಪಕರಣ, ಗಿಡಗಳು, ನೈಸರ್ಗಿಕ & ಸಾವಯವ ತಿಂಡಿ ತಿನಿಸುಗಳು ಮೇಳದ ಆಕರ್ಷಣೆಯಾಗಿದ್ದವು.



ಹೆಬ್ಬಾಳದ ಜಿಕೆವಿಕೆಯ ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಆರಂಭವಾದ ಕೃಷಿ ಮೇಳದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ವಿನೂತನ ತಳಿಗಳ ಬೆಳೆಗಳನ್ನು ಲೋಕಾರ್ಪಣೆಗೊಳಿಸಿದರು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಇತರರಿದ್ದಾರೆ.



ಕೃಷಿ ಮೇಳ (2025)ದಲ್ಲಿ ಕಾಲೇಜು ವಿದ್ಯಾರ್ಥಿಗಳು ಕೃಷಿ ಯಂತ್ರೋಪಕರಣಗಳನ್ನು ಆಸಕ್ತಿ ಗಮನಿಸುತ್ತಿರುವ ದೃಶ್ಯ.

ರಾಜ್ಯದ ಹಲವಾರು ಭಾಗಗಳಿಂದ ಬಂದ ರೈತರು ಮತ್ತು ಇತರರು ಮೇಳವನ್ನು ವೀಕ್ಷಿಸುತ್ತಿದ್ದಾರೆ.

ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ: ಅತ್ಯುತ್ತಮ ರೈತ, ಪ್ರಗತಿಪರ ರೈತ ಮತ್ತು ರೈತ ಮಹಿಳೆ ಹಾಗೂ ಪ್ರಗತಿಪರ ಯುವ ರೈತ ಮತ್ತು ಯುವ ರೈತ ಮಹಿಳೆಯರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ



ಕೃಷಿ ಮೇಳ (2025)ದಲ್ಲಿ ವಿಶೇಷ ತಳಿಯ ಹಸುಗಳು ಮೇಳಕ್ಕೆ ಬಂದವರನ್ನು ಅಚ್ಚರಿಯಿಂದ ಗಮನಸೆಳೆದವು.

ಎಂ.ಎನ್.ರವಿಶಂಕರ್ ಅವರಿಗೆ ನೀಡಲಾಯಿತು. ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ ತಾಲ್ಲೂಕಿನ ಎಲ್.ವಿ.ಶಿವರಾಜು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ವದ್ದಿನಿ ಅವರಿಗೆ ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.

SamyukthaKannada Pg.06

ನಮ್ಮೂರ ನೋಟ
ಬೆಂಗಳೂರಿನ ಕಿರು ಚಿತ್ರಣ



ಕೋದಂಡರಾಮಸ್ವಾಮಿ ನೆಲೆಸಿರುವ ಕಾಚರಕನಹಳ್ಳಿ

ಒಂದು ಕಾಲಕ್ಕೆ ಕಸಾಯಿಖಾನೆ ಸ್ಥಾಪನೆ ವಿಷಯದಿಂದಾಗಿ ದೊಡ್ಡ ಹೋರಾಟಕ್ಕೆ ಕಾರಣವಾಗಿದ್ದ ಸ್ಥಳ ಕಾಚರಕನಹಳ್ಳಿ. ಬಾಣನವಾಡಿ, ಹೆಣ್ಣೂರು ಮತ್ತು ಲಿಂಗರಾಜಪುರದಿಂದ ಸುತ್ತುವರಿದಿರುವ ಹಳೇ ದಂಡು ಪ್ರದೇಶದಲ್ಲಿರುವ ಕಾಚರಕನಹಳ್ಳಿಯಲ್ಲಿ ಪ್ರಸಿದ್ಧ ಕೋದಂಡರಾಮಸ್ವಾಮಿ ದೇವಾಲಯವಿದೆ. 15-16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಸಲಾದ ಪುರಾತನ ದೇವಾಲಯ ಇದು. 1990ರಲ್ಲಿ ಕಸಾಯಿಖಾನೆ ಕಾರಣಕ್ಕೆ ದೊಡ್ಡ ಹೋರಾಟ ನಡೆದು ನಂತರ ದೇವಾಲಯದ ಜೀರ್ಣೋದ್ಧಾರವಾಯಿತು. ಸದಾ ಗೋಜಲು, ಗಲಾಟೆಯಿಂದ ತುಂಬಿರುವ ಇಲ್ಲಿ ಹಿಂದೆ ಬೃಹತ್ ಕೆರೆಯೊಂದಿತ್ತು. ಈಗ ಮುಚ್ಚಲಾಗಿದೆ.

ಅಂಕಿ ಮಾಹಿತಿ

ಸಂಖ್ಯೆಯಲ್ಲಿ ನಗರ ಸುತ್ತು...



1425

ಶ್ರೀ ಗಾಳಿ ಆಂಜನೇಯ ದೇವಸ್ಥಾನವನ್ನು 1425ರಲ್ಲಿ ನಿರ್ಮಿಸಲಾಗಿದ್ದು, 600 ವರ್ಷಗಳ ಇತಿಹಾಸ ಹೊಂದಿದೆ. ವ್ಯಾಸರಾಯರು ಈ ದೇವಾಲಯ ಸ್ಥಾಪಿಸಿದ್ದಾರೆ ಎಂದು ಪುರಾಣ ಹೇಳುತ್ತದೆ. ಕಳೆದ 120 ವರ್ಷಗಳಿಂದ ಪ್ರತಿ ವರ್ಷ ರಥಯಾತ್ರೆ ನಡೆಯುತ್ತದೆ. ಶ್ರೀ ರಾಮ ನವಮಿ ಸಂದರ್ಭದಲ್ಲಿ 9 ದಿನ ಶ್ರೀ ಪಾಂಚರಾತ್ರಾಗಮ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ಜರುಗುತ್ತದೆ.

ರಂಗವಲ್ಲಿ

ಸಂಸ್ಕೃತಿಯ ಆನಾವರಣ



ಪಲ್ಲವಿ
ಬೆಂಗೂರು



ನೀವೂ ರಂಗೋಲಿ ಕಳಿಸಿ ವಿಜಯವಾಣಿ ಸೋದಿ ಸಂಭ್ರಮಿಸಿ
ವಾಟ್ಸ್‌ಆ್ಯಪ್ ನಂಬರ್
88844 32666

ನಂ1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU

ನಮಸ್ತೆ ಬೆಂಗಳೂರು

ಶುಕ್ರವಾರ 14 ನವೆಂಬರ್ 2025 » 14 NOVEMBER 2025
7Bc



5 ಲಕ್ಷ ಜನ ಭೇಟಿ, 62 ಲಕ್ಷ ರೂ. ವಹಿವಾಟು

ಕೃಷಿ ಮೇಳದ ಮೊದಲ ದಿನವಾದ ಗುರುವಾರ ಜನಸಾಗರವೇ ಹರಿದು ಬಂದಿದ್ದು, 5 ಲಕ್ಷ ಮಂದಿ ಭೇಟಿ ನೀಡಿದರು. ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಬೆಂ. ಕೃಷಿ ವಿವಿ ಆಯೋಜಿಸಿದ್ದ ರಿಯಾಯಿತಿ ಭೋಜನವನ್ನು 11,860 ಮಂದಿ ಸವಿದರು. ವಿವಿಧ ಮಳಿಗೆಗಳಲ್ಲಿ 62 ಲಕ್ಷ ರೂ. ಮೌಲ್ಯದ ವಹಿವಾಟು ನಡೆದಿದೆ ಎಂದು ಸಂಘಟಕರು ತಿಳಿಸಿದ್ದಾರೆ.



ಮೇಳೈಸಿದ ಮಿನಿ ಲಾಲ್‌ಬಾಗ್

ಕೃಷಿಮೇಳದಲ್ಲಿ ವಿಶೇಷವಾಗಿ ರೂಪಿಸಿರುವ ಮಿನಿ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ಜನರನ್ನು ಸೆಳೆಯುತ್ತಿದೆ. ಇದರಲ್ಲಿ ರಾಜ್ಯದ ಭೂಪಟವನ್ನು ಹೂವಿನಿಂದ ಬಿಡಿಸಿದ್ದು, ಹಣ್ಣು-ತರಕಾರಿಗಳ ಆಕೃತಿ ಇತ್ಯಾದಿ ಮೇಳದ ಸೊಬಗನ್ನು ಹೆಚ್ಚಿಸಿದೆ.

■ ಆರ್. ತುಳಸಿಕುಮಾರ್/ ಪವನ್ ಆಚಾರ್ಯ ನೀರ್ಜಾಲು ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಗುರುವಾರ ಚಾಲನೆ ದೊರೆಯಿತು. ಮೊದಲ ದಿನವೇ ಜನರನ್ನು ತನ್ನತ್ತ ಸೆಳೆದುಕೊಂಡಿದೆ. ಕೃಷಿ ಯಂತ್ರೋಪಕರಣಗಳು ಜನರನ್ನು ಆಕರ್ಷಿಸುತ್ತಿದೆ.

ಕೃಷಿಯಲ್ಲಿ ಬಿತ್ತನೆ ಮಾಡಲು ಕೂಲಿಯಾಳುಗಳ ಅಭಾವ ನೀಗಿಸಿಕೊಳ್ಳಲು ಹಲವು ಪ್ರಯತ್ನ ಸಾಗಿರುವ ಬೆನ್ನಲ್ಲೇ, ಸುಧಾರಿತ ತಂತ್ರಜ್ಞಾನದಡಿ ಜೋಧಿಸಿರುವ ಸ್ವಯಂಬಿತ್ತನೆ ಬಟ್ಟುವಟಿಕೆ ಕೈಗೊಳ್ಳುವ 'ಕೃಷಿ ಬಾಟ್' ರೈತರಿಗೆ ವರದಾನವಾಗಲಿದೆ. ಬಹುಬೆಳೆಗಳ ಬಿತ್ತನೆ ಹಾಗೂ ರಸಗೊಬ್ಬರ ಹಾಯಿಸುವ ಕೆಲಸವನ್ನು ಏಕಕಾಲದಲ್ಲಿ ಕೈಗೊಳ್ಳಬಹುದಾದ ಈ ಯಂತ್ರವು ನಾಲ್ಕು ಚಕ್ರದ ರೋಬಾಟ್ ಮಾದರಿಯಲ್ಲಿದೆ. ಇದನ್ನು ಸರ್ವಋತುವಿನಲ್ಲೂ ರೈತರು ಬಳಸಿಕೊಳ್ಳಬಹುದಾಗಿದೆ. ಕರಾರುವಾಕ್ಕಾಗಿ ಬಿತ್ತನೆ ಮಾಡುವುದರಿಂದ ಕಾಳು ವ್ಯರ್ಥವಾಗುವುದಿಲ್ಲ. ಬಹುತೇಕ ಎಲ್ಲ ಬೆಳೆಗಳ ಬೀಜಗಳನ್ನು ಬಿತ್ತನೆ ಮಾಡಬಹುದಾಗಿದ್ದು, ಒಬ್ಬ ವ್ಯಕ್ತಿ ಯಂತ್ರ- ಬಿತ್ತನೆ ಕಾರ್ಯವನ್ನು ನಿರ್ವಹಿಸಬಹುದಾಗಿದೆ.



ಬಿತ್ತನೆಗಾಗಿ ಕೃಷಿಬಾಟ್

ಶೇ. 30 ವೆಚ್ಚ ಕಡಿತ

ಕೃಷಿಬಾಟ್ ಮೂಲಕ ಕೈಗೊಳ್ಳುವ ಬಿತ್ತನೆ ಕಾರ್ಯದಿಂದಾಗಿ ಶೇ.30 ವೆಚ್ಚ ಕಡಿಮೆ ಮಾಡಬಹುದಾಗಿದೆ. ಕೂಲಿಯಾಳುಗಳ ಅವಲಂಬನೆಯನ್ನೂ ತಪ್ಪಿಸಲಿದೆ. ಕರಾರುವಾಕ್ಕಾದ ಬಿತ್ತನೆಯಿಂದಾಗಿ ಸಾಮಾನ್ಯಕ್ಕಿಂತ ಶೇ.25 ಬೀಜಗಳ ಉಳಿತಾಯ ಆಗಲಿದೆ. ಯಂತ್ರದ ಬೆಲೆ ಏಳೆಂಟು ಲಕ್ಷ ರೂ. ಆಗುತ್ತದೆ. ಖರೀದಿ ಮಾಡಲಾಗದವರು ಬಾಡಿಗೆ ರೂಪದಲ್ಲಿ ಬಳಸಬಹುದು.

ಫಟಾಫಟ್ ಕೆಲಸಕ್ಕೆ ರೋಬಾಟ್



ಕಾರ್ಯನಿರ್ವಹಣೆ ಹೇಗೆ?: ಪುಟ್ಟ ಯಂತ್ರದ ಮೇಲ್ಭಾಗದಲ್ಲಿ ಬೀಕಾಕಾದ ಬಾಕ್ಸ್ ಮಾದರಿಯೊಳಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಪ್ರತ್ಯೇಕವಾಗಿ ತುಂಬಿಸಬೇಕು. ಈ ಬಾಕ್ಸ್‌ನಿಂದ ನೆಲಮಟ್ಟಕ್ಕೆ ಕೊಳವೆ ಮೂಲಕ ಬೀಜ ಹಾಗೂ ರಸಗೊಬ್ಬರ ಸಾಗುತ್ತದೆ. ಯಂತ್ರದ ಕೆಳಭಾಗದಲ್ಲಿ 5 ಹಲಬೆಗಳಿದ್ದು, ಏಡೂ ಸಾಲುಗಳಲ್ಲಿ ಬಿತ್ತನೆ ಮಾಡಬಹುದು. ಯಾವ ಬೆಳೆಯನ್ನು ಎಷ್ಟು ಅಂತರದಲ್ಲಿ ಬಿತ್ತನೆ ಮಾಡಬೇಕು ಹಾಗೂ ಎಷ್ಟು ಆಳಕ್ಕೆ ಹಲಬೆ ಇಳಿಯಬೇಕು ಎಂಬುದನ್ನು ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಿರುವುದರಿಂದ ನಿಖರ ಫಲಿತಾಂಶ ಸಿಗಲಿದೆ. ಇದನ್ನು ಬಳಸಿಕೊಂಡು ರಿಮೋಟ್ ಮೂಲಕ ಜಮೀನಿನಲ್ಲಿ ಬಿತ್ತನೆ ಮಾಡಬಹುದು ಎಂದು ಟಿಪ್ಪಾರೆಡ್ಡಿ ಸಂಸ್ಥೆಯ ಪ್ರತಿನಿಧಿ ವೈಭವ್ ತಿಳಿಸಿದ್ದಾರೆ.

ಜನಾಕರ್ಷಣೆಯ ಗವ್ಯೋತ್ಪನ್ನ

ಜಾಗರಣೆ: ರಾಘವೇಂದ್ರ ಸಿ.

ಈ ಬಾರಿ ಜಿಕೆವಿಕೆಯಲ್ಲಿ ಗೋಮೂತ್ರ, ಸಗಣಿ ಮುಂತಾದ ಗವ್ಯೋತ್ಪನ್ನಗಳ ಪ್ರದರ್ಶನಗೋಮಿಗಳನ್ನು ಆಕರ್ಷಿಸುತ್ತಿದೆ. ಹಿಂದು ಸಂಸ್ಕೃತಿಯಲ್ಲಿ ಗೋವಿಗೆ ವಿಶೇಷ ಸ್ಥಾನಮಾನ ಕೊಡುವ ಮೂಲಕ ಗೋವಿನ ಮಹತ್ವವನ್ನು ಸಾರುವ ವಿಡಿಯೋ ತುಣುಕು ಮಳಿಗೆಯಲ್ಲಿ ಪ್ರಸಾರವಾಗುತ್ತಿದ್ದು, ಸಗಣಿಯನ್ನು ಕೇವಲ ಗೊಬ್ಬರ, ಜೈವಿಕ ಅನಿಲ ಹಾಗೂ ಅಲ್ಪ ಪ್ರಮಾಣದಲ್ಲಿ ಬೆರಣಿಗಾಗಿ ಬಳಸುವ ದಿನಮಾನದಲ್ಲಿ ಅದನ್ನು ಹೊರತುಪಡಿಸಿ ಬೇರೆ ಯಾವ ರೀತಿಯ ಉತ್ಪನ್ನಗಳನ್ನು ತಯಾರಿಸಬಹುದು ಎಂಬುದಕ್ಕೆ ಈ ಬಾರಿಯ ಕೃಷಿಮೇಳ ಸಾಕ್ಷಿಯಾಗಿದೆ.



ಕೃಷಿ ಮೇಳದಲ್ಲಿ ಗವ್ಯೋತ್ಪನ್ನ ಮಳಿಗೆಯಲ್ಲಿ ದ ಮ್ಯಾನ್ಯೋ ಫೌಂಡೇಶನ್ ಸಿಬ್ಬಂದಿ

■ **ಪಂಚಗವ್ಯದ ಬಗ್ಗೆ ಮಾಹಿತಿ ಪಡೆಯಲು ಪೈಪೋಟಿ**

ದ ಮ್ಯಾನ್ಯೋ ಫೌಂಡೇಶನ್ 'ಆತ್ಮನಿರ್ಭರ ಗೋಕಾಲ್' ಎಂಬ ಪರಿಕಲ್ಪನೆಯೊಂದಿಗೆ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಗೋಕಾಲಿಗಳಿಗೆ ಮೂಲಸೌಕರ್ಯ, ಹಸುಗಳಿಗೆ ಮೇವು, ಆರೋಗ್ಯ ತಪಾಸಣೆ ಸೇರಿ ಗೋಶಾಲೆಯ ಆಗತ್ಯಗಳನ್ನು ಪೂರೈಸುತ್ತಿದೆ. ನಂತರ ಅಲ್ಲಿ ಸಂಗ್ರಹವಾಗುವ ಸಗಣಿ ಮತ್ತು ಹಸುವಿನ ಮೂತ್ರದ ಮೂಲಕ ನಾನಾ ಬಗೆಯ ಉತ್ಪನ್ನಗಳನ್ನು ಉತ್ಪಾದಿಸಿ, ಸೂಕ್ತ ಪ್ಯಾಕಿಂಗ್ ಮೂಲಕ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಉತ್ಪನ್ನ ಯಾವುವು?: ನಂದಿ ಪಂಚಗವ್ಯ ಸ್ಟಿಕ್ಸ್ ಕ್ಯಾನಿಸ್ಟರ್, ಗೋವರ್ಧನ ಸಗಣಿ ಕೇಕ್, ಹೋಮ್ ಕಿಟ್, ಆಫೀಸ್ ಕಿಟ್, ನಂದಿ ಬಿದಿರುರಹಿತ ಆಗರಬತ್ತಿ, ನಂದಿ ಪಂಚಗವ್ಯ ಕೋನ್ಸ್ ಕ್ಯಾನಿಸ್ಟರ್, ಗಿರ್ ಗೌರಿ ಕಪ್, ಹಲಾಧರ ಹವನ ಕಪ್‌ಗಳು, ನಂದಿ ವಾಸ್ತುಚಕ್ರ ದಿಯಾ, ಹಲಾಧರ ದೂಪದ ಸ್ಟಿಕ್‌ಗಳು ಸೇರಿ ನಾನಾ ಬಗೆಯ ದೀಪಗಳು, ಪೂಜಾ ಸಾಮಗ್ರಿ ಲಭ್ಯವಿವೆ.

ಔಷಧ ಸಿಂಪಡಣೆಗೆ ಕ್ರಾಪ್ ಎಕ್ಸ್‌ಪ್ಲೋರ್



ಜಮೀನಿನ ಸರ್ವೇ ಮಾಡಿ, ಹಾನಿಯಾದ ಭಾಗಕ್ಕೆ ಬೇಕಾದ ಪ್ರಮಾಣದ ಔಷಧ ಸಿಂಪಡಿಸುವುದು ಕ್ರಾಪ್ ಎಕ್ಸ್‌ಪ್ಲೋರ್ ಸಂಸ್ಥೆಯ 20 ಲೀ. ಸಾಮರ್ಥ್ಯದ ಡ್ರೋನ್‌ನ ವಿಶೇಷತೆಯಾಗಿದೆ. ಜಿಕೆವಿಕೆಯಲ್ಲಿದ್ದ ಡ್ರೋನ್‌ಗಳ ಸಾಲಿನಲ್ಲಿ ತುಲೆ ಎತ್ತಿನಂತ ಶಕ್ತಿಶಾಲಿ ಡ್ರೋನ್ ಇದಾಗಿದ್ದು, ಇದರ ಕೆಲ ಉಪಕರಣಗಳನ್ನು ಭಾರತದಲ್ಲಿಯೇ ಸಿದ್ಧಪಡಿಸಲಾಗುತ್ತದೆ. ಬ್ಯಾಟರಿಚಾಲಿತ ಡ್ರೋನ್ ಇದಾಗಿದ್ದು, ಗರಿಷ್ಠ 5-6 ಆಡಿ ಎತ್ತರದ ಬೆಳೆಗಳಿಗೆ ಔಷಧ ಸಿಂಪಡಿಸಲು ಸೂಕ್ತವಾಗಿದೆ. ಒಂದು ಎಕರೆ ಪ್ರದೇಶಕ್ಕೆ ಕೇವಲ 7-8 ನಿಮಿಷದಲ್ಲಿ ಔಷಧ ಸಿಂಪಡಿಸುವ ಈ ಡ್ರೋನ್ ಒಂದು ಬಾರಿ ಚಾರ್ಜಿಂಗ್ ಮಾಡಿದರೆ 4 ಎಕರೆಗೆ ಔಷಧ ಸಿಂಪಡಿಸುವ ಸಾಮರ್ಥ್ಯ ಹೊಂದಿದೆ.

ಸೂಪರ್ ರೋವರ್

ಕೃಷಿಮೇಳ - 2025

ಕೃಷಿಮೇಳದಲ್ಲಿ ತರಕಾರಿ ಬೆಳೆಗಳ ಬಿತ್ತನೆ ಯಂತ್ರಗಳನ್ನು ಪ್ರದರ್ಶಿಸುವ ಮೂಲಕ ವಿಶೇಷ ಗಮನ ಸೆಳೆದ ತಮಿಳುನಾಡಿನ ಕೊಯಮತ್ತೂರು ಮೂಲದ ರೋವರ್ ಸಂಸ್ಥೆ ತಮ್ಮ ಸ್ಟಾರ್ಟಪ್‌ಗೆ ಇಲ್ಲಿ ಶಕ್ತಿ ತುಂಬಿದೆ.

ಹಲವು ವಿಶೇಷತೆ ಹೊಂದಿರುವ ಈ ಯಂತ್ರವು ಕಡಿಮೆ ಬೆಲೆಯಲ್ಲಿ ರೈತನ ವಿವಿಧ ಬೇಡಿಕೆಗಳನ್ನು ಪೂರೈಸಲು, ಒಂದೇ ಸಮಯದಲ್ಲಿ 4 ಸಾಲುಗಳಲ್ಲಿ ಬಿತ್ತನೆ ಮಾಡಬಲ್ಲ ಸಾಮರ್ಥ್ಯ ಹೊಂದಿದೆ. 10 ಕೆ.ಜಿ. ತೂಕವಿರುವ ಈ ಯಂತ್ರವು ಹಸ್ತಚಾಲಿತ ಅಥವಾ ಮ್ಯಾನುವಲ್ ಮೂಲಕವೂ ಬಳಸಿಕೊಳ್ಳಬಹುದು. ಕ್ಯಾರೆಟ್, ಬೀಟ್‌ರೂಟ್, ಮೂಲಂಗಿ, ಎಳ್ಳು, ಈರುಳ್ಳಿ ಇತ್ಯಾದಿ ಬೆಳೆಗಳ ಬೀಜ ಬಿತ್ತುವುದಕ್ಕೆ ಅನುಕೂಲವಾಗಲಿದೆ.

ರೈತರಿಗೆ ಅನುಕೂಲ ಏನು?: ಸಾಮಾನ್ಯವಾಗಿ ತಂತ್ರಜ್ಞಾನ ವಿಕಸಿತ ರೈತ ಉಪಯೋಗಿ ವಸ್ತುಗಳು ಹೆಚ್ಚಿನ ಬೆಲೆಯನ್ನು ಹೊಂದಿ, ಬಡ ರೈತನ ಕೈಗೆ ಸಿಗದೇ ಹೋಗುವ ಉದಾಹರಣೆಗಳಿವೆ. ಆದರೆ, ಈ ಉಪಕರಣದ ಪ್ರಯೋಜನವನ್ನು ಎಲ್ಲ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಖರೀದಿಗೆ ಅನುಕೂಲವಾಗುವ ಯೋಜನೆಯನ್ನು ರೋವರ್ ಸಂಸ್ಥೆ ಮಾಡಿದೆ. ಎರಡು ಮಾದರಿಯಲ್ಲಿ ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದು, ಉಪಯೋಗ ಒಂದೇ ಇದ್ದರೂ ಪ್ರಮಾಣ ಮಾತ್ರ ವ್ಯತ್ಯಾಸ ಇರಲಿದೆ. ಸಣ್ಣ ಯಂತ್ರವನ್ನು 'ಮೈಕ್ರೋನ್' ಎಂದು ಹೆಸರಿಸಲಾಗಿದ್ದು, ಇದಕ್ಕೆ ಮಾರುಕಟ್ಟೆಯಲ್ಲಿ 14,500 ರೂ. ನಿಗದಿಪಡಿಸಲಾಗಿದೆ. ಕೃಷಿಮೇಳದ ಸ್ಟಾಲ್‌ನಲ್ಲಿ ರಿಯಾಯಿತಿ ಮೇರೆಗೆ 12,000 ರೂ.ಗೆ ಲಭಿಸಿದೆ. ಇದೇ ಯಂತ್ರದ ಅಡ್ವಾನ್ಸ್ ಉಪಕರಣವು ಮಾರುಕಟ್ಟೆ ಬೆಲೆ 50 ಸಾವಿರ ರೂ. ಹೊಂದಿದ್ದು, 45 ಸಾವಿರ ರೂ.ಗೆ ಲಭ್ಯವಾಗಲಿದೆ.



ಯಂತ್ರದ ವೈಶಿಷ್ಟ್ಯ: ಅತ್ಯಂತ ಕಡಿಮೆ ಬೀಜ ಬಳಕೆ ಮಾಡಿಕೊಂಡು 4 ಗಂಟೆಯಲ್ಲಿ 1 ಎಕರೆ ಬಿತ್ತನೆ ಮಾಡಬಹುದು, ಜತೆಗೆ ಮುಚ್ಚಲೂಬಹುದು. ಈ ಕೆಲಸಗಳು ಏಕಕಾಲದಲ್ಲಿ ಮಾಡಬಹುದು. ಇದರಿಂದ ರೈತರಿಗೆ 300-400 ರ್ಹಾಂ ದೀಪವನ್ನು ಉಳಿಸಬಹುದಾಗಿದೆ ಎಂದು ರೋವರ್ ಸಂಸ್ಥೆಯ ಪಾಲುದಾರ ಜಾನ್ ತಿಳಿಸಿದ್ದಾರೆ.

ರೈತರಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಲಹೆ | ಕೃಷಿಮೇಳಕ್ಕೆ ಚಾಲನೆ

ಆಹಾರ ಸಂಸ್ಕರಣೆ, ಮೌಲ್ಯವರ್ಧನೆಗೆ ಆದ್ಯತೆ

ಬೆಂಗಳೂರು: ರೈತರು ತಮ್ಮ ಆದಾಯವನ್ನು ವೃದ್ಧಿಸಿಕೊಳ್ಳಲು ಹಾಗೂ ಕೃಷಿ ಉದ್ದಿಮೆದಾರರಾಗಲು ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ಆಯೋಜಿಸಿದ್ದ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ದೇಶವು ವಾರ್ಷಿಕ 300 ದಶಲಕ್ಷ ಮೆಟ್ರಿಕ್ ಟನ್ ಆಹಾರ ಬೆಳೆಗಳು ಹಾಗೂ 350 ದಶಲಕ್ಷ ಮೆಟ್ರಿಕ್ ಟನ್ ಹಣ್ಣು- ತರಕಾರಿ ಬೆಳೆದು ಸ್ವಾವಲಂಬನೆ ಸಾಧಿಸಿದೆ. ಹೆಚ್ಚುವರಿ ಬೆಳೆಗಳನ್ನು ಸಂಸ್ಕರಣೆ ಮೂಲಕ ಹೊಸ ಉತ್ಪನ್ನಗಳನ್ನು ರೂಪಿಸಿ ಮಾರುಟ್ಟೆಗೆ ಬಿಡುಗಡೆ ಮಾಡಬೇಕು. ಜತೆಗೆ ಮೌಲ್ಯವರ್ಧನೆ ಉತ್ಪನ್ನಗಳನ್ನು ಹೊರದೇಶಗಳಿಗೆ ರವು ಮಾಡಿ ಉದ್ಯಮದಾರರಾಗಲು ಮುಂದಾಗಬೇಕು ಎಂದರು.

ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ರೈತರೇ ಕಾರಣ. ಇವರಿಗೆ ಬೆನ್ನೆಲುಬಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ನಿರತವಾಗಿವೆ. ಕೃಷಿ ವಿವಿ ಹಾಗೂ ವಿಜ್ಞಾನಿಗಳು ಕೂಡ ಅನ್ನದಾತರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಹೊಸ ತಳಿ ಹಾಗೂ ತಾಂತ್ರಿಕತೆಗಳ ಕೊಡುಗೆಯಿಂದ ರೈತರನ್ನು ತಂತ್ರಜ್ಞಾನದಲ್ಲಿ ಪರಿಣಿತರಾಗುವಂತೆ ತಯಾರು ಮಾಡಬೇಕಿದೆ. ಈ ಸವಾಲಿನ ಜತೆಗೆ ರವು ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಕೀತಲೆಕರಣ ಘಟಕಗಳು ಹಾಗೂ ಮಾರುಕಟ್ಟೆ ಸರಪಳಿಯನ್ನು ಉತ್ತೇಜಿಸಲಾಗುವುದು. ಕೃಷಿ ಕ್ಷೇತ್ರ ಕೈಗಾರಿಕೆ ಮಾದರಿಯಲ್ಲಿ ಬೆಳವಣಿಗೆ ಕಂಡಲ್ಲಿ ರೈತರ ಬದುಕು ಹಸನಾಗುತ್ತದೆ ಎಂದರು.

ಹೊಸ ತಳಿಗಳ ಬಿಡುಗಡೆ: ಇದೇ ವೇಳೆ ವಿವಿ ಅಭಿವೃದ್ಧಿಪಡಿಸಿರುವ 5 ಹೊಸ ತಳಿಗಳು ಹಾಗೂ 37 ತಾಂತ್ರಿಕತೆಗಳನ್ನು ಲೋಕಾರ್ಪಣೆ ಮಾಡಲಾಯಿತು. ಜತೆಗೆ ಕೃಷಿ ಸಾಧಕರ ಕೈಪಿಡಿ ಬಿಡುಗಡೆ ಮಾಡಲಾಯಿತು. ಕೃಷಿ ಇಲಾಖೆಯ ಪ್ರದಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ ಇತರರಿದ್ದರು.



ಜಿಕೆವಿಕೆ ಕ್ಯಾಂಪಸ್‌ನಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಸಾಧಕ ರೈತರನ್ನು ಸನ್ಮಾನಿಸಲಾಯಿತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಚಲುವರಾಯಸ್ವಾಮಿ, ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಎಸ್. ಸೆಲ್ವಕುಮಾರ್ ಇದ್ದರು.

ರೈತರು ಸಮಗ್ರ ಬೇಸಾಯ ಕೇಂದ್ರೀಕರಿಸಲಿ

■ **ಕೃಷಿ ಸಚಿವ ಎನ್. ಚಲುವರಾಯಸ್ವಾಮಿ**

ಪ್ರಸ್ತುತ ಹವಾಮಾನ ಬದಲಾವಣೆಯಿಂದಾಗಿ ಬೆಳೆಗಳು ಸಕಾಲದಲ್ಲಿ ರೈತರ ಕೈಸೇರುತ್ತಿಲ್ಲ. ಅತಿವೃಷ್ಟಿ, ಅನಾವೃಷ್ಟಿಯಿಂದಾಗಿ ಬೆಳೆದ ಬೆಳೆ ಹಾಳಾಗುತ್ತಿವೆ. ಇಂತಹ ಸಮಸ್ಯೆಯ ಮಧ್ಯೆಯೂ ರೈತರ ಕೃಷಿಯಿಂದ ತಳಿಗಳನ್ನು ಸಂಶೋಧಿಸಿ ಅನ್ನದಾತರಿಗೆ ನೀಡುವ ಮೂಲಕ ವಿವಿಗಳು ತಮ್ಮ ಸಂಶೋಧನೆಯನ್ನು ಮೇಲ್ಮಟ್ಟಕ್ಕೆ ಏರಿಸಬೇಕಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ಇಕ್ರೀಸ್ಯಾಟ್‌ಗೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಕೇಂದ್ರವು, 25ಕ್ಕೂ ಹೆಚ್ಚು ದಿನ ನೀರಿನಲ್ಲೇ ಇದ್ದರೂ ಯಾವುದೇ ಸಮಸ್ಯೆ ಆಗದ ಭತ್ತ ತಳಿಯನ್ನು ಅಭಿವೃದ್ಧಿಪಡಿಸಿರುವುದನ್ನು ಕಂಡೆ. ಇಂತಹ ಮಾದರಿಯಲ್ಲಿ ನಮ್ಮ ವಿವಿಗಳು ಸಂಶೋಧನೆ ಹಾಗೂ ಅವಿಷ್ಕಾರಕ್ಕೆ ಒತ್ತು ನೀಡಬೇಕು ಎಂದು ಕಿವಿಮಾತು ಹೇಳಿದರು.

ಸಾಧಕರಿಗೆ ಪ್ರಶಸ್ತಿ ಪ್ರದಾನ: ಕೃಷಿ ಮೇಳದಲ್ಲಿ ನೀಡಲಾಗುವ ವಾರ್ಷಿಕ ಕೃಷಿ ಸಾಧಕ ಪ್ರಶಸ್ತಿಯನ್ನು ಪುರುಷರಿಗೆ ಸಚಿವರು ಪ್ರದಾನ ಮಾಡಿದರು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ

ಕೃಷಿಯನ್ನು ಉದ್ಯಮವಾಗಿಸಲು ಶ್ರಮಿಸಿ: ಶೋಭಾ

ಜಿಕೆವಿಕೆಯಲ್ಲಿ 4 ದಿನಗಳ ಕೃಷಿ ಮೇಳಕ್ಕೆ ಅದ್ದೂರಿ ಚಾಲನೆ | ಹೊಸ ಯಂತ್ರಗಳು, ಸುಧಾರಿತ ತಳಿಗಳು, ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ
ಆಹಾರ ಸಂಸ್ಕರಣೆ, ಮೌಲ್ಯವರ್ಧನೆ ಮಾಡಿ ರಫ್ತು ಹೆಚ್ಚಿಸಿಕೊಳ್ಳಲು ಕೇಂದ್ರ ಸಚಿವೆ ಶೋಭಾ ಸಲಹೆ | ಸರ್ಕಾರದಿಂದ ಅಗತ್ಯ ನೆರವಿನ ಭರವಸೆ

■ ಉದಯವಾಣಿ ಸಮಾಚಾರ

ಬೆಂಗಳೂರು: ರೈತನ ಪರಿಶ್ರಮದಿಂದ ಆಹಾರ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸಿದೆ. ರೈತರು ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ವಿಶೇಷ ಆದ್ಯತೆ ನೀಡಿ ಕೃಷಿಯನ್ನು ಉದ್ಯಮವಾಗಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು ಎಂದು ಕೇಂದ್ರ ಸಣ್ಣ ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಬೆಂಗಳೂರು ಕೃಷಿ ವಿವಿ ಹಾಗೂ ವಿವಿಧ ಇಲಾಖೆ, ಸಂಘ-ಸಂಸ್ಥೆಗಳ ಸಹಯೋಗದಲ್ಲಿ 4 ದಿನಗಳವರೆಗೆ ನಡೆಯಲಿರುವ 2025ರ ಕೃಷಿ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಕೃಷಿಯು ಅತಿ ಹೆಚ್ಚು ಉದ್ಯೋಗಾವಕಾಶ ಕಲ್ಪಿಸುವ ಕ್ಷೇತ್ರವಾಗಿದೆ. ದೇಶದಲ್ಲಿ ಶೇ.50ರಷ್ಟು ಮಂದಿ ಕೃಷಿ ಆವಲಂಬಿಸಿದ್ದಾರೆ. ಪ್ರಸ್ತುತ ದೇಶವು 353 ಮೆಟ್ರಿಕ್ ಟನ್ ಆಹಾರಧಾನ್ಯ ಹಾಗೂ 355 ಮೆ.ಟ. ಹಣ್ಣು-ತರಕಾರಿಗಳನ್ನು ಬೆಳೆಯುವ ಮೂಲಕ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿ ರಫ್ತು ಮಾಡುವ ಸಾಮರ್ಥ್ಯ ಹೊಂದಿದೆ. ರೈತರು ಪರಸರಕ್ಕೆ ತಕ್ಕಂತೆ ಕಡಿಮೆ ಜಾಗದಲ್ಲಿ ಹೆಚ್ಚು ಇಳುವರಿ ನೀಡುವ ಸುಧಾರಿತ ತಳಗಳು, ಹೊಸ ತಂತ್ರಜ್ಞಾನವನ್ನು ಕೃಷಿ ವಿವಿಗಳು ಅಭಿವೃದ್ಧಿಪಡಿಸಿವೆ ಇದರ ಉಪಯೋಗ ಪಡೆಯಿರಿ ಎಂದರು.

ಆಹಾರ ಸಂಸ್ಕರಣೆ, ಮೌಲ್ಯವರ್ಧನೆಗೆ ಆದ್ಯತೆ ನೀಡಿ: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ಆಹಾರ ಬೆಳೆ ಬೆಳೆಯುವುದಿಲ್ಲ. ಬದಲಾಗಿ ತ್ವರಿತ ಆಹಾರ (ರೆಡಿ ಟು ಕುಕ್)ದ ಮೇಲೆ ಆವಲಂಬಿತವಾಗಿದ್ದಾರೆ. ದೇಶದಲ್ಲಿ ಹೆಚ್ಚುವರಿ ಆಹಾರ ಉತ್ಪಾದನೆಯಾಗುತ್ತಿದ್ದು ವಿಸ್ತರಣೆಗೆ ರೈತರು ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ಆದ್ಯತೆ ನೀಡಿದ್ದಲ್ಲಿ ದ್ವಿಗುಣ ಆದಾಯ ಗಳಿಸಬಹುದು. ಪ್ರಸ್ತುತ ಆಹಾರ ಉತ್ಪನ್ನಗಳ ರಫ್ತು ಮಾರಾಟ ದೊಡ್ಡ ಸವಾಲಾಗಿದೆ. ವಿಶೇಷ ರೈಲು, ವಿಮಾನಗಳ ಮೂಲಕ ರಫ್ತು ಮಾಡಲು ಕೇಂದ್ರ ಸರ್ಕಾರ ಚಿಂತಿಸಿದೆ. ರೈತರು ಬೇಡಿಕೆಗೆ ತಕ್ಕಂತೆ ಉತ್ಪನ್ನಗಳನ್ನು ಬೆಳೆದು ಕೃಷಿಯನ್ನು ಉದ್ಯಮವಾಗಿ ಬೆಳೆಸುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನೆರವು ನೀಡಲಿದೆ ಎಂದರು.

ರೈತರೇ ಉದ್ಯಮಿಗಳಾಗಿ: ಹವಾಮಾನ ಸೇರಿ ಹಲವು ಸವಾಲಿನ ನಡುವೆ ಕೃಷಿಯನ್ನೇ ನಂಬಿ ಆಹಾರ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಸಾಧಿಸಲು ರೈತನ ಶ್ರಮ ಮತ್ತು ಬದ್ಧತೆಯೇ ಕಾರಣ. ಹೊಸ ತಾಂತ್ರಿಕತೆ, ಸುಧಾರಿತ ತಳಗಳನ್ನು ಅಳವಡಿಸಿಕೊಂಡು ಉದ್ಯಮಿಗಳಾಗಿ ಬಲವರ್ಧನೆಗೊಳ್ಳಬೇಕು ಎಂದು ಕೃಷಿ ಸಚಿವ ಹೇಳಿದರು.

ಕೃಷಿ ಮೇಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಡಿಮೆ ವೆಚ್ಚದಲ್ಲಿ ಉತ್ತಮ ಇಳುವರಿ ಮತ್ತು ಆದಾಯ ನೀಡುವ ಬೆಳೆಗಳನ್ನು ಪರಿಚಯಿಸುವ ಉದ್ದೇಶದಿಂದ ಇಂತಹ ಕೃಷಿ ಮೇಳಗಳು ಸಹಕಾರಿಯಾಗಲಿದೆ. ಕೃಷಿಯನ್ನು ಲಾಭದಾಯಕವಾಗಿಸಿ ರೈತರನ್ನು ಆರ್ಥಿಕವಾಗಿ ಬಲಗೊಳಿಸುವುದು ಸರ್ಕಾರ ಹಾಗೂ ಕೃಷಿ ವಿವಿಗಳ ಜವಾಬ್ದಾರಿ. ಆ ನಿಟ್ಟಿನಲ್ಲಿ ಬಾರಿಯೂ ಹಲವು ಸುಧಾರಿತ ತಳ, ಹಾಗೂ ತಂತ್ರಜ್ಞಾನವನ್ನು ಬಿಡುಗಡೆಗೊಳಿಸಿದ್ದು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ರೈತರನ್ನು ಉದ್ದಿಮೆದಾರರಾಗಿಸುವ ಭಾಗವಾಗಿ ಕಿಪಿಕ್ ಸಂಸ್ಥೆಯೂ ಪಿಎಂಎಫ್‌ಎಂಇ ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ 5 ಸಾವಿರ ಕಿರು ಆಹಾರ ಸಂಸ್ಕರಣಾ ಘಟಕ ಆರಂಭಿಸಿದೆ. ಇದಕ್ಕಾಗಿ 15 ಲಕ್ಷ ರೂ.ವರೆಗೆ ಸಹಾಯಧನ ಸಿಗಲಿದೆ ಎಂದರು. ರೈತರು ಸಮಗ್ರ ಬೇಸಾಯದ ಬಗ್ಗೆ ಗಮನ ಹರಿಸಬೇಕು, ರೈತರ ಬೆಲೆಗಳಿಗೆ ಬೆಲೆ, ಸೂಕ್ತ ಮಾರುಕಟ್ಟೆ ವ್ಯವಸ್ಥೆ ಸಿಗಬೇಕು. ಈ ನಿಟ್ಟಿನಲ್ಲಿ ಸಂಶೋಧನಾ ಸಂಸ್ಥೆಗಳು, ಸರ್ಕಾರ ಬೆಂಬಲವಾಗಿರಲಿದೆ ಎಂದರು.



ಜಿಕೆವಿಯಲ್ಲಿ ನಡೆದ ಕೃಷಿ ಮೇಳದಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು.

ಕೃಷಿ ಸಾಧಕರಿಗೆ ಪ್ರಶಸ್ತಿ, ಸನ್ಮಾನ

ಈ ಬಾರಿಯ ಕೃಷಿ ಮೇಳದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಆತ್ಯುತ್ತಮ ಪ್ರಶಸ್ತಿಯನ್ನು ಸಮಗ್ರ ಕೃಷಿಗೆ ಕೋಲಾರದ ಮದನಹಳ್ಳಿಯ ರೈತ ಎಂ.ಎನ್.ರವಿಶಂಕರ್ ಅವರಿಗೆ, ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಆತ್ಯುತ್ತಮ ರೈತ ಮಹಿಳೆ ಪ್ರಶಸ್ತಿಯನ್ನು ದೊಡ್ಡಬಳ್ಳಾಪುರ ಕೆಂಜೆನಹಳ್ಳಿಯ ಪದ್ಮಿನಿ ಅವರಿಗೆ, ರಾಜ್ಯಮಟ್ಟದ ಆತ್ಯುತ್ತಮ ರೈತ ಪ್ರಶಸ್ತಿಯನ್ನು ಎಲ್.ವಿ.ಶಿವರಾಜು ಅವರಿಗೆ ನೀಡಿ ಸನ್ಮಾನಿಸಲಾಯಿತು. ಇದರೊಂದಿಗೆ ಜಿಲ್ಲಾಮಟ್ಟದಲ್ಲಿ ಸತೀಶ್‌ಕುಮಾರ್, ಬಿ.ಶ್ರೀಕಾಂತ್, ಚಂದ್ರಯ್ಯ, ಲಕ್ಷ್ಮಮ್ಮ, ಆನುಷಾ, ಪೂರ್ಣಿಮಾ ಅವರಿಗೆ ಜಿಲ್ಲಾಮಟ್ಟದ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ಬೆಂಗಳೂರು ಕೃಷಿ ವಿವಿಯು ಹಲವು ಸಂಶೋಧನೆ ಕೈಗೊಂಡಿದ್ದು ಮತ್ತಷ್ಟು ರೈತ ಸ್ನೇಹಿ ತಂತ್ರಜ್ಞಾನ, ಸಂಶೋಧನೆಗೆ ಶ್ರಮಿಸಲಿದೆ. ಆಹಾರ ಸಂಸ್ಕರಣೆ, ಮೌಲ್ಯವರ್ಧನೆಗೆ ಒತ್ತು ನೀಡಲಿದೆ. ಈ ಬಾರಿಯ ಮೇಳ ಕೀಟ ವಿಜ್ಞಾನ, ಕೃಷಿ ಪ್ರವಾಸೋದ್ಯಮ ಮೊದಲಾದ ವೈಶಿಷ್ಟ್ಯ ಹೊಂದಿದ್ದು ಸದುಪಯೋಗಪಡಿಸಿಕೊಳ್ಳಬೇಕು.
> ● ಡಾ. ಎಸ್.ವಿ.ಸುರೇಶ್, ಜಿಕೆವಿಕೆ ಕುಲಪತಿ

> ಯಾವುದೇ ಉದ್ಯಮ, ಕೃಷಿಯಲ್ಲಿ ಬಂಡವಾಳ ಹೂಡಿಕೆಯೊಂದೆ ಯಶಸ್ಸಿಗೆ ಕಾರಣವಾಗಲ್ಲ. ನಿರಂತರ ಶ್ರಮವಿದ್ದಾಗ ಮಾತ್ರ ಪ್ರತಿಫಲ ಸಾಧ್ಯ. ಯುವಜನತೆ ಕೃಷಿಯಲ್ಲಿ ಬದ್ಧತೆ ಬೆಳೆಸಿಕೊಂಡು ಮುಂದುವರಿಯಬೇಕು. ನಾನು 2014 ರಿಂದ ಕೃಷಿಯಲ್ಲಿ ನಿರಂತರ ಶ್ರಮವಹಿಸಿದ ಕಾರಣ ಇಂದು ಪ್ರಶಸ್ತಿ ಲಭಿಸಿದೆ.
> ● ಎಂ.ಎನ್.ರವಿಶಂಕರ, ರಾಜ್ಯಮಟ್ಟದ ದೇವೇಗೌಡ ಆತ್ಯುತ್ತಮ ಪ್ರಶಸ್ತಿ ಪುರಸ್ಕೃತ

> ಬೇಡಿಕೆಗೆ ತಕ್ಕಂತೆ ಗುಣಮಟ್ಟದ ಬೆಳೆಗಳನ್ನು ಬೆಳೆದಾಗ ಹೆಚ್ಚು ಆದಾಯ ಗಳಿಸಬಹುದು. ಆಣಬೆ ಕೃಷಿ, ಸಿರಿಧಾನ್ಯ, ಎರೆಹುಳು ಗೊಬ್ಬರ ಉತ್ಪಾದನೆಯಲ್ಲಿ ತೊಡಗಿ ಸ್ವ-ಉದ್ಯಮದ ಮೂಲಕ ಯಶಸ್ಸು ಕಂಡಿದ್ದೇನೆ. ಹಲವು ಮಂದಿಗೆ ಉದ್ಯೋಗ ನೀಡಿದ್ದೇನೆ.
> ● ಪದ್ಮಿನಿ, ರಾಜ್ಯಮಟ್ಟದ ಆತ್ಯುತ್ತಮ ರೈತ ಮಹಿಳೆ ಪ್ರಶಸ್ತಿ ಪುರಸ್ಕೃತೆ

ಗಂಟೆಗೆ 600-700 ತೆಂಗು ಸುಲಿವ ನ್ಯಾನೋ ಯಂತ್ರ



ದೊಡ್ಡ ಪ್ರಮಾಣದಲ್ಲಿ ತೆಂಗು ಬೆಳೆವ ಕೃಷಿಕರಿಗೆ ಅನುಕೂಲವಾಗಲೆಂದು ಗಂಟೆಗೆ 600- 700 ತೆಂಗಿನ ಕಾಯಿ ಸುಲಿಯುವ ತೆಂಗಿನ ಕಾಯಿ ಸಿಪ್ಪೆ ಸುಲಿಯುವ ಎಆರ್‌ಎಸ್ ನ್ಯಾನೋ ಯಂತ್ರವು ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಿತು. ಯಂತ್ರವನ್ನು ತಮಿಳುನಾಡಿನ ಎಆರ್‌ಎಸ್ ಎಂಜಿನಿಯರಿಂಗ್ ಕಂಪನಿ ತಯಾರಿಸಿದ್ದು, ಕೃಷಿ ಮೇಳದಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದೆ. 220 ವೋಲ್ಟ್ ಗಳ ಸಿಂಗಲ್ ಫೇಸ್, 2 ಎಚ್ ಪಿ ಎಲೆಕ್ಟ್ರಿಕ್ ಮೋಟಾರ್‌ನೊಂದಿಗೆ, ಗಂಟೆಗೆ 600 ರಿಂದ 700 ತೆಂಗಿನಕಾಯಿ ಸಿಪ್ಪೆಯನ್ನು ಯಂತ್ರವು ಸುಲಿಯುತ್ತದೆ. 150 ಕೆ.ಜಿ.ತೂಕದ ಈ ಯಂತ್ರಕ್ಕೆ 1.40 ಲಕ್ಷ ರೂ. ದರವಿದೆ ಎಂದು ಕಂಪನಿಯ ಸಿಬ್ಬಂದಿ ಕನಕಶ್ರೀ ಮಾಹಿತಿ ನೀಡಿದರು.

ಗರಿಯನ್ನು ಬಿಡಿಸಿ ಪೊರಕೆ ಕಡ್ಡಿ ತಯಾರಿಸುವ ಯಂತ್ರ



ತೆಂಗಿನ ಗರಿಗಳ ಪೊರಕೆ ಮಾಡುವುದು ಸುಲಭದ ಕೆಲಸವಲ್ಲ ಒಂದೊಂದೇ ಗರಿಯನ್ನು ಕೈಯಲ್ಲಿ ಹಿಡಿದು ಅದರಿಂದ ಕಡ್ಡಿಯನ್ನು ಬೇರ್ಪಡಿಸಬೇಕು. ಮನೆಯಲ್ಲಿ ಇರುವ ಹಿರಿಯ ಜೀವಗಳು ಇದನ್ನು ಸಲೀಸಾಗಿ ಮಾಡುತ್ತಾರೆ. ಆದರೆ ತೆಂಗಿನ ಗರಿಗಳಿಂದ ಕಡ್ಡಿಗಳನ್ನು ಸುಲಭವಾಗಿ ಬೇರ್ಪಡಿಸುವ ಪೊರಕೆ ಕಡ್ಡಿ ತಯಾರಿಸುವ ಮೇಳದಲ್ಲಿ ಮಸಸೂರಗೊಂಡಿತು. ತಮಿಳುನಾಡಿನ ಎಆರ್‌ಎಸ್ ಎಂಜಿನಿಯರಿಂಗ್ ಕಂಪನಿಯು ಗಂಟೆಗೆ 3-5 ಕೆ.ಜಿ ಕಡ್ಡಿಯನ್ನು ಯಂತ್ರವು ತೆಗೆಯುತ್ತದೆ. ಮನೆಯ ವಿದ್ಯುತ್ ಅನ್ನು ಬಳಸಿ ಮಹಿಳೆಯರು ಬಿಡುವಿನ ವೇಳೆಯಲ್ಲಿ ಈ ಯಂತ್ರವನ್ನು ಬಳಸಿ ಸುಲಭವಾಗಿ ಕಡ್ಡಿ ಪೊರಕೆಯನ್ನು ತಯಾರಿಸಬಹುದು.15 ಕೆ.ಜಿ.ತೂಕ ಹೊಂದಿರುವ ಈ ಯಂತ್ರಕ್ಕೆ 9,600 ರೂ. ಬೆಲೆಯಿದೆ ಎಂದು ಕಂಪನಿಯ ಸಿಬ್ಬಂದಿ ಸೂರ್ಯ ನಾರಾಯಣ್ ಉದಯವಾಣಿಗೆ ತಿಳಿಸಿದರು.

ಹಳ್ಳಿಗಾಡಿನ ಜೀವನ!

ಮೊದಲ ಬಾರಿಗೆ ಕೃಷಿ ಮೇಳದಲ್ಲಿ ಕೃಷಿ ಪ್ರವಾಸೋದ್ಯಮ (ಅಗ್ರಿ ಟೂರಿಸಂ) ಎಂಬ ಶೀರ್ಷಿಕೆಯಡಿ ಜಿಕೆವಿಕೆ ಆವರಣದ ಸುಮಾರು 3 ಎಕರೆ ವಿಸ್ತೀರ್ಣದಲ್ಲಿ ಹಳ್ಳಿಗಾಡಿನ ಜೀವನ ರೈತರ ಬದುಕು ಬಿಂಬಿಸುವ, ಮಾದರಿಯನ್ನು ನಿರ್ಮಿಸಿ ನಗರವಾಸಿಗಳ ಗಮನ ಸೆಳೆದಿದೆ. ಇಲ್ಲಿ ಹಳ್ಳಿ ಮನೆ, ಬಾವಿ ಹಳ್ಳಿಯ ಯತ್ತಿನಗಾಡಿ ಸವಾರಿ, ಹಾಲು ಕರೆಯುವುದು, ರಾಗಿ ಬೀಸುವುದು, ಭತ್ತ ಕುಟ್ಟುವುದು, ಸೇರು, ಪಾವು, ಮಡಿಕೆ, ಚಟಾಕು, ಬೀಸು ಕಲ್ಲು, ಒನಕೆಗಳು, ಮೊರ, ಮಡಿಕೆ, ಗೊಟ್ಟಗಳು, ಮಂಕರಿಗಳು, ಕಣಜಗಳು ಮುಂತಾದ 50ಕ್ಕೂ ಹೆಚ್ಚು ಪಾರಂಪರಿಕ ಪರಿಕರಗಳನ್ನು ಒಂದೇ ಜಾಗದಲ್ಲಿ ನೋಡಬಹುದಾಗಿದೆ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವಿದೆ.

ಮರದ ಮೇಲೆ ಗುಡಿಸಲು



ಜಿಕೆವಿಕೆ ಆವರಣದಲ್ಲಿ ಮರದ ನಿರ್ಮಿಸಿರುವ ಗುಡಿಸಲು ಎಲ್ಲ ಆಕರ್ಷಣೆಯಾಗಿದೆ. ಕಾಡಂಚಿನ ಗ್ರಾಮಗಳಲ್ಲಿರುವ ರೈತರು ತಾವು ಬೆಳೆದ ಬೆಳೆಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ಹೊಲದಲ್ಲಿರುವ ಮರದ ಮೇಲೆ ಗುಡಿಸಲು ನಿರ್ಮಿಸಿಕೊಂಡು ಕಾವಲು ಕಾಯುತ್ತಾರೆ. ಇದು ಕಾಡಂಚಿನ ಗ್ರಾಮಗಳಲ್ಲಿರುವ ರೈತರು ತಾವು ಬೆಳೆದ ಬೆಳೆಗಳನ್ನು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಕಂಡು ಹಿಡಿದಿರುವ ಉಪಾಯ.

ಮೌಲ್ಯವರ್ಧನೆಯ ನೇರಳೆ ಉತ್ಪನ್ನಗಳು

ರೋಗ ನಿರೋಧಕ ಶಕ್ತಿ ಹೊಂದಿದೆ ಸಂಸ್ಕರಿಸಲ್ಪಟ್ಟ ಮೌಲ್ಯವರ್ಧಿತ ನೇರಳೆ,



ನುಗ್ಗೆ, ಹಾಗೂ ಸಿರಿಧಾನ್ಯಗಳ ಉತ್ಪನ್ನಗಳು ಕಂಡು ಬಂದವು. ಮಧುಮೇಹ, ರಕ್ತದೊತ್ತಡ ನಿಯಂತ್ರಿಸಬಹುದಾದ ಕನಿಷ್ಠ 6 ತಿಂಗಳವರೆಗೂ ಕೆಡುರಿಸಬಹುದಾದ ನೇರಳೆ ಜಾಮೂನು, ಕ್ಯೂಬ್ಸ್, ಜಾಮ್ ಮೊದಲಾದ ಉತ್ಪನ್ನಗಳು ತಯಾರಿಸಿ ಪ್ರದರ್ಶನಕ್ಕೆ ಇಡಲಾಗಿತ್ತು. ಇದರೊಂದಿಗೆ ರಾಗಿ, ಜೋಳ, ನವಣೆ ಮೊದಲಾದ ಸಿರಿಧಾನ್ಯಗಳ ರೆಡಿ ಟು ಈಟ್ ಉತ್ಪನ್ನಗಳು ಆಹಾರ ಆಸಕ್ತರನ್ನು ಸೆಳೆದವು.


ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಸೇರಿರುವ ಕೃಷಿ ಆಸಕ್ತರು, ರೈತರು.

ಮೊದಲ ದಿನ 8.51 ಲಕ್ಷ ಮಂದಿ ಭೇಟಿ

ಕೃಷಿ ಮೇಳದಲ್ಲಿ ಗುರುವಾರ ಮಧ್ಯಾಹ್ನದ ಊಟಕ್ಕೆ ರಾಗಿ ಮುದ್ದೆ, ಅವರೆಕಾಳು ಸಾರು, ಜಿಲೇಬಿ, ಕೋಳಿಮೊಟ್ಟೆ, ಹುರುಳಿಕಾಯಿ ಪಲ್ಯ, ಮೊಸರನ್ನ ಒಳಗೊಂಡ ಬಿಸಿ ಬಿಸಿ ಊಟ ಬಡಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಹಲವು ಸಿಬ್ಬಂದಿ ಮಿಷಿಯಿಂದ ಊಟ ಬಡಿಸುವಲ್ಲಿ ತೊಡಗಿದ್ದರು. ಮೊದಲ ದಿನದಲ್ಲಿ 8.51 ಲಕ್ಷ ರೈತರು ಸಾರ್ವಜನಿಕರು ಮೇಳದಲ್ಲಿ ಭಾಗವಹಿಸಿದ್ದರು. ಇದರಲ್ಲಿ 11 ಸಾವಿರಕ್ಕೂ ಹೆಚ್ಚು ಮಂದಿ ರಿಯಾಯಿತಿ ದರದಲ್ಲಿ ಊಟ ಸವಿದರು. ಒಟ್ಟಾರೆ ಅಂದಾಜು 62 ಲಕ್ಷ ರೂ ವಹಿವಾಟು ನಡೆದಿದೆ. ಪ್ರತಿ ವರ್ಷ ಕೃಷಿ ಮೇಳದಲ್ಲಿ ನೆಟ್‌ವರ್ಕ್ ಸಮಸ್ಯೆ ಕಂಡು ಬರುತ್ತಿದ್ದು, ಈ ಬಾರಿಯೂ ಸಮಸ್ಯೆ ಎದುರಾಗಿತ್ತು.

ಕೃಷಿ ಮೇಳದಲ್ಲಿ ₹6.5 ಲಕ್ಷದ ಹಳ್ಳಿಕಾರ್ ಹೋರಿಗಳು!

ರೈತರ ಗಮನ ಸೆಳೆಯುತ್ತಿರುವ ವಿಶಿಷ್ಟ ತಳಿಯ ಹೋರಿಗಳು | ಮೈಸೂರಿನ ಜೋಡಿ ಹಳ್ಳಿಕಾರ್ ಹೋರಿಗೆ 13 ಲಕ್ಷ ರೂ. ಮೌಲ್ಯ

■ ತಂಗಂ ಜೆ.ಗೋಪಿನಾಥಂ

ಉದಯವಾಣಿ ಸಮಾಚಾರ

ಬೆಂಗಳೂರು: ನಗರದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ (ನ.13ರಿಂದ ನ.16ರವರೆಗೆ) ಕೃಷಿ ಮೇಳಕ್ಕೆ ಬಂದಿದ್ದ 3 ಹಳ್ಳಿಕಾರು ಹೋರಿಗಳು ಗಮನ ಸೆಳೆಯುತ್ತಿದ್ದು, ಬೆಲೆ ಕೇಳಿದರೆ ಹೌಹಾರುವಂತಿತ್ತು. ಒಂದೇ ಹಳ್ಳಿಕಾರ್‌ಹಸುವಿನ 2 ಹೋರಿಗಳ ಅಣ್ಣನ (ದೊಡ್ಡ ಹೋರಿ) ಬೆಲೆ 6 ಲಕ್ಷ ರೂ. ಆದರೆ, ತಮ್ಮನ (ಸಣ್ಣಹೋರಿ) ಬೆಲೆ 6.5 ಲಕ್ಷ ರೂ.!

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ತರಬಳ್ಳಿಯ ಟಿ.ಎಸ್.ನಾರಾಯಣ ಸ್ವಾಮಿ ತಾವು ಸಾಕಿದ್ದ ಹಳ್ಳಿಕಾರ್‌ತಳಿಯ 1 ಹಸುವಿನ 2 ಹೋರಿಗಳನ್ನು ರಾಜಧಾನಿ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ನ.13ರಿಂದ ಆರಂಭಗೊಂಡಿರುವ ಕೃಷಿಮೇಳಕ್ಕೆ ಕರೆತಂದಿದ್ದಾರೆ. 6.5 ಲಕ್ಷ ರೂ. ಮೌಲ್ಯದ ಅಧಿಪತಿ ಎಂಬ ಹೆಸರಿನ ಹೋರಿಗೆ 2.5 ವರ್ಷವಾದರೆ, 6 ಲಕ್ಷ ರೂ. ಮೌಲ್ಯದ ಹೋರಿಗೆ 6 ವರ್ಷ ವಯಸ್ಸಾಗಿದೆ. ಈ ಹೋರಿಯನ್ನು ತಳಿ ಅಭಿವೃದ್ಧಿಗಾಗಿ (ಕ್ರಾಸಿಂಗ್) ಇರುವಂತಹದ್ದು. ಕೃಷಿ ಕಾರ್ಯಕ್ಕೂ ಈ ಹೋರಿಗಳನ್ನು ಟಿ.ಎಸ್.ನಾರಾಯಣ ಸ್ವಾಮಿ ಬಳಸಿಕೊಳ್ಳುತ್ತಿದ್ದಾರೆ.


ಹಳ್ಳಿಕಾರ್ ಹೋರಿಗಳ ಜತೆ ರಾಹುಲ್ ಗೌಡ.

ಕೃಷಿ ಮೇಳದಲ್ಲಿ ಹಳ್ಳಿಕಾರ್ 'ರಾಮ-ಲಕ್ಷ್ಮಣ'

ಈ ಬಾರಿಯ ಕೃಷಿ ಮೇಳಕ್ಕೆ ರಾಮ-ಲಕ್ಷ್ಮಣ ಎಂಬ ಹೆಸರಿನ ಹಳ್ಳಿಕಾರ್ ತಳಿ ಹೋರಿಗಳನ್ನು ಆನೇಕಲ್ ತಾಲೂಕಿನ ಚಂದಾಪುರದ ರಾಜಣ್ಣ ಕರೆ ತಂದಿದ್ದಾರೆ. ಈ 2 ಹೋರಿಗೂ 7 ವರೆ ವರ್ಷ ವಯಸ್ಸಾಗಿದೆ. ಜೋಡಿ ಹೋರಿಗೆ 12 ಲಕ್ಷಕ್ಕೆ ರೈತರು ಕೇಳಿದ್ದರೂ ಕೊಟ್ಟಿಲ್ಲ. ಮೊದಲ ಬಾರಿಗೆ ಕೃಷಿ ಮೇಳಕ್ಕೆ ಹೋರಿಯನ್ನು ಕರತಂದಿದ್ದೇನೆ ಎಂದು ರಾಜಣ್ಣತಿಳಿಸಿದರು.

ಹೋರಿಗಳನ್ನು ಮಕ್ಕಳಂತೆ ಪ್ರೀತಿಸುವ ನಾರಾಯಣ ಸ್ವಾಮಿ: ಹೋರಿಗಳಿಗೆ ನಿತ್ಯ ರವೆ ಗಂಜಿ, ಬೆಣ್ಣೆ ಹುರಳಿ, ಅಕ್ಕಿ ನುಚ್ಚು, ರವೆ ಭೂಸ ನೀಡುತ್ತಾರೆ. ಹೋರಿಗಳನ್ನು ಮಕ್ಕಳಂತೆ ಪ್ರೀತಿಸುತ್ತಾರೆ. ಹಳ್ಳಿಕಾರ್ ತಳಿ ಹಸು, ಹೋರಿಗಳ ಸಾಕಾಣಿಕೆ ನಮ್ಮ ಕುಟುಂಬದ ಸಂಪ್ರದಾಯ. ಹಳ್ಳಿಕಾರ್‌ತಳಿಯ ರಾಸು, ಹೋರಿ ಸಾಕಣೆ ಎಂದರೆ ಕೇವಲ ಹವ್ಯಾಸವಲ್ಲ, ನಮ್ಮ ಬದುಕಿನ ಭಾಗ ಎಂದು ಹೇಳುತ್ತಾರೆ ತರಬಳ್ಳಿಯ ಟಿ.ಎಸ್.ನಾರಾಯಣ ಸ್ವಾಮಿ.

ಗಮನ ಸೆಳೆದ ಎತ್ತರದ ಹಳ್ಳಿಕಾರ್‌ತಳಿ!: ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಬನ್ನೂರಿನಿಂದ ಕೃಷಿ ಮೇಳಕ್ಕೆ ಬಂದಿರುವ ಹಳ್ಳಿಕಾರ್‌ತಳಿಯ 13 ಲಕ್ಷ ರೂ. ಹೋರಿ ಗಮನ ಸೆಳೆಯುತ್ತಿದೆ. ಬನ್ನೂರಿನ ಡಾ.ರಾಹುಲ್‌ಗೌಡರು ಮೇಳಕ್ಕೆಂದೇ ಈ ದುಬಾರಿ ಬೆಲೆಯ ಎತ್ತರದ ಹಳ್ಳಿಕಾರ್‌ಹೋರಿಯನ್ನು ತಂದಿದ್ದಾರೆ. ಜೋಡಿ ಹಳ್ಳಿಕಾರ್‌ತಳಿಯ ಹೋರಿಯ ಬೆಲೆ

'ಕೀಟ ವಿಸ್ಮಯ, ಮತ್ಸ್ಯ ಲೋಕದ ಆಕರ್ಷಣೆ | ಸುಧಾರಿತ ತಳಿಗಳು, ಯಂತ್ರೋಪಕರಣ ಪ್ರದರ್ಶನ

ಕೃಷಿಮೇಳಕ್ಕೆ ಮೊದಲ ದಿನವೇ ಭರ್ಜರಿ ಸ್ಪಂದನೆ

■ ವಿಕ ಸುದ್ದಿಲೋಕ ಬೆಂಗಳೂರು

ಕೃಷಿ ಮೇಳಕ್ಕೆ ಮೊದಲ ದಿನವಾದ ಗುರುವಾರ ರೈತರು ಹಾಗೂ ಸಾರ್ವಜನಿಕರೂ ಸೇರಿದಂತೆ ಲಕ್ಷಾಂತರ ಮಂದಿ ಭೇಟಿ ನೀಡಿ ಮೇಳ ವೀಕ್ಷಿಸಿದರು. ತಾಕುಗಳಲ್ಲಿ ಬೆಳೆದಿದ್ದ ಬಗೆ ಬಗೆಯ ಹೂವು, ತರಕಾರಿಗಳನ್ನು ಕಂಡು ಸಂಭ್ರಮ ಪಟ್ಟರು.

ಗ್ರಾಮೀಣ ರೈತರು ಯಂತ್ರೋಪಕರಣಗಳ ಬಗ್ಗೆ ಮಾಹಿತಿ ಪಡೆದರೆ, ನಗರದ ಕೃಷಿ ಆಸಕ್ತರು ಕೈತೋಟಕ್ಕೆ ಬೇಕಾದ ಸಲಕರಣೆಗಳತ್ತ ಒಲವು ತೋರುತ್ತಿದ್ದರು. ಶಾಲಾ-ಕಾಲೇಜು ವಿದ್ಯಾರ್ಥಿಗಳ ತಂಡ ಹಳ್ಳಿ ಚಿತ್ರಣದ ಅಗ್ರಿ ಟೂರಿಸಂ ವಿಭಾಗಕ್ಕೆ ಭೇಟಿ ನೀಡಿದರು.

ಇದೇ ಮೊದಲ ಬಾರಿಗೆ ಕೃಷಿ ಮೇಳದಲ್ಲಿ ಪುಷ್ಪ ಪ್ರದರ್ಶನವನ್ನು ಆಯೋಜಿಸಲಾಗಿದ್ದು, ಕೆಂಪು-ಹಳದಿ ಹೂವುಗಳಲ್ಲಿ ಕರ್ನಾಟಕ ನಕ್ಷೆಯನ್ನು ನಿರ್ಮಿಸಲಾಗಿದ್ದು, ಪುಷ್ಪ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಮೇಳಕ್ಕೆ ಲಕ್ಷಾಂತರ ಮಂದಿ ಭೇಟಿ ನೀಡಿದ್ದು, ಈ ಪೈಕಿ 11,086 ಮಂದಿ ವಿವಿಯ ಭೋಜನಾಲಯದಲ್ಲಿ ರಿಯಾಯಿತಿ ದರದಲ್ಲಿ ಮಧ್ಯಾಹ್ನದ ಊಟ ಮಾಡಿದರು. ಮೇಳದಲ್ಲಿ ಸುಮಾರು 62 ಲಕ್ಷ ರೂ. ವಹಿವಾಟು ನಡೆದಿದೆ ಎಂದು ಜಿಕೆವಿಕೆ ಅಧಿಕಾರಿಗಳು ತಿಳಿಸಿದರು.

ಮುದ್ದೆ-ಕಾಳುಸಾರು: ಗುರುವಾರ ಮಧ್ಯಾಹ್ನದ ಊಟಕ್ಕೆ ರಾಗಿ ಮುದ್ದೆ, ಅವರೆಕಾಳು ಸಾರು, ಜಿಲೇಬಿ, ಕೋಳಿಮೊಟ್ಟೆ, ಹುರುಳಿಕಾಯಿ ಪಲ್ಯ, ಮೊಸರನ್ನ ಒಳಗೊಂಡ ಬಿಸಿ ಬಿಸಿಯಾದ ಊಟ ಬಡಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಹಲವು ಸಿಬ್ಬಂದಿ ಖುಷಿಯಿಂದ ಊಟ ಬಡಿಸುವಲ್ಲಿ ತೊಡಗಿದ್ದರು.

ಮೇಳದಲ್ಲಿ ನೆಟ್‌ವರ್ಕ್ ಸಮಸ್ಯೆ: ಪ್ರತಿ ವರ್ಷದಂತೆ ಈ ವರ್ಷವೂ ಕೃಷಿ ಮೇಳದಲ್ಲಿ ನೆಟ್‌ವರ್ಕ್ ಸಮಸ್ಯೆ ತೀವ್ರವಾಗಿ ಕಾಡಿತು. ಫೋನ್ ಕರೆಗಳನ್ನು ಸ್ವೀಕರಿಸುವುದಾಗಲಿ ಅಥವಾ ಕರೆ ಮಾಡಲು ಸಾಧ್ಯವಾಗುತ್ತಿಲ್ಲ. ಕೃಷಿ ಪರಿಕರಗಳನ್ನು ಖರೀದಿಸಿದರೆ ಆನ್‌ಲೈನ್ (ಫೋನ್‌ಪೇ, ಗೂಗಲ್ ಪೇ)ನಲ್ಲಿ ಹಣ ಪಾವತಿಸಲು ಆಗದೆ ಸಾರ್ವಜನಿಕರಿಗೆ ತುಂಬಾ ಸಮಸ್ಯೆಯಾಗುತ್ತಿದೆ. ಪ್ರತಿ ಬಾರಿಯೂ ಸಮಸ್ಯೆ ಮರುಕಳಿಸುತ್ತಿದ್ದರೂ ಆಯೋಜಕರು ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸಿದರು.

ಕೀಟ ವಿಸ್ಮಯದ ಆಕರ್ಷಣೆ: ಇದೇ ಮೊದಲ ಬಾರಿಗೆ 'ಕೀಟ ವಿಸ್ಮಯ'ದ ವಿಶೇಷ ಪ್ರದರ್ಶನ ಆಯೋಜಿಸಲಾಗಿದೆ. ಮಕ್ಕಳು ಮತ್ತು ಕೃಷಿ ಆಸಕ್ತರನ್ನು ಈ ಕೀಟ ಜಗತ್ತು ಸೆಳೆಯುತ್ತಿದೆ. ಈ ಮಳಿಗೆಯಲ್ಲಿ ಹೊರಭಾಗದಲ್ಲಿಯೇ ಕೀಟದ ಬೃಹತ್ ಮಾದರಿಯನ್ನು ಪ್ರದರ್ಶಿಸಲಾಗಿದೆ. ಒಳ ಹೋದರೆ, ಜೀವಂತ ಇರುವ ಮತ್ತು ಜೀವಂತವಿಲ್ಲದ ಹಲವು ಬಗೆಯ ಕೀಟಗಳು ಕುತೂಹಲ ಮೂಡಿಸಿದರೆ, ಇನ್ನು ಕೆಲವು ಭಯ ಹುಟ್ಟಿಸುತ್ತಿತ್ತು. ಜೇನುನೊಣಗಳು, ದುಂಬಿಗಳು, ಎರೆಹುಳು, ಗೆದ್ದಲು ಹುಳು, ಜೀರುಂಡೆ, ಮಿಡತೆ, ಗುಲಗಂಜಿ ಹುಳು ಸೇರಿದಂತೆ ರೈತ ಸ್ನೇಹಿ ಕೀಟಗಳು ಹಾಗೂ ಬೆಳೆಗೆ ಹಾನಿಕಾರಕವಾಗುವ ಕೀಟಗಳನ್ನು ಪ್ರದರ್ಶಿಸಲಾಗಿದೆ. ಮತ್ಸ್ಯ ಲೋಕವೂ ಮೇಳದಲ್ಲಿದೆ.

ವಿಶ್ವದ ಅತ್ಯಂತ ಚಿಕ್ಕ ಹಸು: ವಿಶ್ವದ ಅತ್ಯಂತ ಚಿಕ್ಕ ಹಸು ಎಂದು ಖ್ಯಾತಿ ಪಡೆದಿರುವ ಪುಂಗನೂರು ತಳಿ ಮೇಳದಲ್ಲಿ ಎಲ್ಲರ ಗಮನ ಸೆಳೆಯಿತು. ಈ ಹಸುವನ್ನು ಮನೆಯ ಒಳಗೆ ಸಾಕಬಹುದಾಗಿದ್ದು, ಇದು ಕೇವಲ ಎತ್ತರ ಕಮ್ಮಿ ಎನ್ನುವುದಕ್ಕಿಂದ ಇದರ ಹಾಲಿನಲ್ಲಿ ಹಲವು ಬಗೆಯ ಔಷಧೀಯ ಗುಣಗಳಿದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ಈ ಹಸುವಿನ ಮೂಲವಾಗಿದ್ದು, ಜೋಡಿ ಹಸುವಿಗೆ 2.5 ಲಕ್ಷ ರೂ. ಬೆಲೆಯಿದೆ.











ರೈತ ಸ್ನೇಹಿ ಡ್ರೋನ್‌ಗಳು ಅಖಾಡಕ್ಕೆ

■ ಪುನೀತ್ ಎ.ಆರ್. ಬೆಂಗಳೂರು

c-punith.r@timesofindia.com

ಔಷಧ ಸಿಂಪಡಿಸುವ ಮುನ್ನ ಜಮೀನಿನ ಸರ್ವೆ ಮಾಡಿ, ಬೆಳೆಯ ಯಾವ ಭಾಗದಲ್ಲಿ ಹೆಚ್ಚಿನ ಹಾನಿಯುಂಟಾಗಿದೆ. ಯಾವ ಭಾಗಕ್ಕೆ ಯಾವ ಪ್ರಮಾಣದ ಔಷಧ ಅಗತ್ಯ ಎಂದು ಮುಂಚಿತವಾಗಿಯೇ ನಿರ್ಧರಿಸುವ ವಿನೂತನ ಡ್ರೋನ್ ಜಿಕೆವಿಕೆ ಆವರಣದ ಕೃಷಿ ಮೇಳದಲ್ಲಿ ರೈತರನ್ನು ಆಕರ್ಷಿಸಿತು.

ಡ್ರೋನ್ ಮೂಲಕ ಬೆಳೆಗಳಿಗೆ ಔಷಧ ಸಿಂಪಡಿಸುವಾಗ ಸಂಪೂರ್ಣ ಬೆಳೆಗೆ ಒಂದೇ ಪ್ರಮಾಣದ ಔಷಧ ಬಿದ್ದರೆ, 'ಅತಿಯಾದರೆ ಅಮೃತವೂ ವಿಷ'ವೆಂಬಂತೆ ಔಷಧವೂ ಮಾರಕವಾಗಬಹುದು. ಆದ್ದರಿಂದ, ಬೆಳೆಯ ಹಾನಿಗೆ ತಕ್ಕಂತೆ ಔಷಧ ಸಿಂಪಡಿಸುವುದು ಅತೀ ಅವಶ್ಯಕ. ಆದರಂತೆ, ಗಾಳಿ ಹೆಚ್ಚಿದ್ದರೆ ಪಕ್ಕದ ಹಿಪ್ಪುನೇರಳೆ ಬೆಳೆಗೆ ಬೀಳುವ ಕೀಟನಾಶಕಗಳಿಂದ ರೇಷ್ಮೆ ಹುಳಗಳ ಜೀವಕ್ಕೇ ಸಂಚಕಾರ ಉಂಟಾಗುತ್ತದೆ. ಹೀಗಾಗಿ ಈ ಗೊಂದಲಗಳನ್ನು ಸೂಕ್ತವಾಗಿ ನಿರ್ವಹಿಸುವ ಡ್ರೋನ್‌ಗಳು ಕೃಷಿ ಮೇಳದಲ್ಲಿ ಕಂಗೊಳಿಸುತ್ತಿವೆ.

ಗಾಳಿಯ ವೇಗ ಎಷ್ಟಿದೆ? ಬೆಳೆಯ ಯಾವ ಭಾಗಕ್ಕೆ ಎಷ್ಟು ಔಷಧ ಸಿಂಪಡಿಸಬೇಕು ಎಂಬುದರ ಬಗ್ಗೆ ಮುನ್ಸೂಚನೆ ನೀಡುವ ಕುರಿತು ಡ್ರೋನ್‌ನಲ್ಲಿ ಪ್ರೋಗ್ರಾಮಿಂಗ್ ಮಾಡಲಾಗಿದ್ದು, ರೈತರ ಕಣ್ಣು ಡ್ರೋನ್‌ಗಳ ಮೇಲೆ ನೆಟ್ಟಿದೆ.

ಭಾರತದಲ್ಲೇ ಡ್ರೋನ್ ಜೋಡಣೆ: ಕ್ರಾಪ್ ಎಕ್ಸ್‌ಪ್ಲೋರ್ ಸಂಸ್ಥೆಯ '20 ಲೀಟರ್' ಹೆಸರಿನ ಡ್ರೋನ್‌ಗೆ ಬಳಸಲಾಗಿರುವ ಕೆಲ ಉಪಕರಣಗಳನ್ನು ಭಾರತದಲ್ಲಿಯೇ ಸಿದ್ಧಪಡಿಸಲಾಗಿದೆ. ಚೀನಾ, ಥೈವಾನ್ ಸೇರಿದಂತೆ ಕೆಲ ದೇಶಗಳಿಂದ ಕೆಲವು ಉಪಕರಣಗಳನ್ನು ಆಮದು ಮಾಡಿಕೊಂಡಿದ್ದರೂ ಅಂತಿಮವಾಗಿ ಡ್ರೋನ್‌ನ ಜೋಡಣೆ ಭಾರತದಲ್ಲಿಯೇ ಆಗಿದೆ.

ಬ್ಯಾಟರಿ ಬಾಲಿತ: 20 ಲೀ. ಔಷಧ ಸಂಗ್ರಹಣ ಸಾಮರ್ಥ್ಯ ಹೊಂದಿರುವ ಈ ಡ್ರೋನ್ ಗರಿಷ್ಠ 5ರಿಂದ 6 ಅಡಿ ಎತ್ತರದ ಬೆಳೆಗಳಿಗೆ ಔಷಧ ಸಿಂಪಡಿಸಲು ಸೂಕ್ತವಾಗಿದೆ. ಒಂದು ಎಕರೆ ಪ್ರದೇಶಕ್ಕೆ ಕೇವಲ 7ರಿಂದ 8 ನಿಮಿಷದಲ್ಲಿ ಔಷಧ ಸಿಂಪಡಿಸುವ ಈ ಡ್ರೋನ್ ಒಂದು ಬಾರಿ ಚಾರ್ಜ್ ಮಾಡಿದರೆ 4 ಎಕರೆಗೆ ಔಷಧ ಸಿಂಪಡಿಸಬಹುದಾದ ಸಾಮರ್ಥ್ಯ ಹೊಂದಿದೆ.



ಬಾಡಿಗೆಗೂ ಲಭ್ಯ

ಸುಮಾರು 8 ಲಕ್ಷ ರೂ. ತಗಲುವ ಈ ಡ್ರೋನ್ ಸದ್ಯ ಬಾಡಿಗೆಗೂ ಲಭ್ಯವಿದೆ. ರೈತರು ಹೇಳಿದ ಜಾಗಕ್ಕೆ ಡ್ರೋನ್ ಮತ್ತು ಅದರ ನಿರ್ವಾಹಕನನ್ನೂ ಕಳುಹಿಸಿಕೊಡುತ್ತೇವೆ. ರೈತರು ನಿರ್ವಾಹಕರ ಸಂಬಳವನ್ನಾಗಲೀ, ಸಂಚಾರದ ಖರ್ಚಾಗಲೀ ಏನನ್ನೂ ನೀಡದೆ, ಔಷಧ ಸಿಂಪಡಿಸಿದ್ದಕ್ಕೆ ಎಕರೆ ತಲಾ 500 ರೂ. ಬಾಡಿಗೆ ನೀಡಿದರೆ, ಸಾಕು. ಈ ಕೆಲಸವನ್ನು ನಾವು ಸೇವೆಯ ರೂಪದಲ್ಲಿ ಮಾಡುತ್ತಿದ್ದೇವೆ ಎನ್ನುತ್ತಾರೆ ಕ್ರಾಪ್ ಎಕ್ಸ್‌ಪ್ಲೋರ್ ಸಂಸ್ಥೆಯ ಸಪ್ಲೇ ಚೈನ್ ಮ್ಯಾನೇಜರ್ ಪ್ರಭಾಕರನ್.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳದಲ್ಲಿ ಶ್ವೇತ ಕಪಿಲ, ಡಾಂಗಿ ನಾಟಿ ಹಸುಗಳ ಆಕರ್ಷಣೆ

ಉಳುಮೆ ಜತೆ ಹೈನೋದ್ಯಮಕ್ಕೂ ಸೈ

■ ಎಚ್.ಪಿ.ಪುಣ್ಯವತಿ ಬೆಂಗಳೂರು

punyavathi.hp@timesofindia.com

ಅಡಿಯಿಂದ ಮುಡಿವರೆಗೆ ಬಿಳಿ ಬಣ್ಣದ ನಾಟಿ ಹಸು, ಅದರ ಮೂತಿ, ಕಣ್ಣರೆಪ್ಪೆ, ಬಾಲ ಎಲ್ಲವೂ ಬಿಳಿ. ಹೆಸರು ಶ್ವೇತ ಕಪಿಲ. ಕಾಂಕ್ರೇಜ್ ಗೋವಿನ ತಳಿಯ ವಿಶಿಷ್ಟ ಗುಣಗಳನ್ನು ಹೊಂದಿರುವ ನಾಟಿ ಹಸು ಉಳುಮೆಗೂ ಸೈ, ಹೈನೋದ್ಯಮಕ್ಕೂ ಸೈ!

ಸಾಮಾನ್ಯವಾಗಿ ರೈತರು ಉಳುಮೆಗಾಗಿ ಎತ್ತುಗಳನ್ನು ಸಾಕಿದರೆ, ಹಾಲಿಗಾಗಿ ಹಸುಗಳನ್ನು ಸಾಕುತ್ತಾರೆ. ಈಗ ಮೇಳಕ್ಕೆ ಬಂದಿರುವ ನಾಟಿ ತಳಿಗಳು ಉಳುಮೆಯನ್ನೂ ಮಾಡುತ್ತವೆ. ಉತ್ತಮ ಪ್ರಮಾಣದಲ್ಲಿ ಹಾಲು ಕೂಡ ಕೊಡುತ್ತವೆ. ಅದರಲ್ಲೂ ಕಾಂಕ್ರೇಜ್ ತಳಿಯ ಶ್ವೇತ ಕಪಿಲ ವಿಶೇಷವಾಗಿದ್ದು, ಸುಮಾರು 50 ಸಾವಿರ ಹಸುಗಳ ಪೈಕಿ ಒಂದು ಮಾತ್ರ ಸಂಪೂರ್ಣ ಬಿಳಿಬಣ್ಣದ ಹಸು ಕಾಣಬಹುದು. ಅದುವೇ ಶ್ವೇತ ಕಪಿಲ.



ಶ್ವೇತ ಕಪಿಲವು ದಿನಕ್ಕೆ ಸುಮಾರು 15 ಲೀಟರ್ ಹಾಲು ಕೊಡುತ್ತದೆ. ಇದರ ಹಾಲು ಉತ್ತಮ ಗುಣಮಟ್ಟದ ಕೊಬ್ಬಿನಾಂಶದೊಂದಿಗೆ ರುಚಿಯೂ ಇರುತ್ತದೆ. ಜೋಡಿ ಹಸುಗಳಿದ್ದರೆ ವ್ಯವಸಾಯಕ್ಕೂ ಬಳಸಬಹುದು. ಜತೆಗೆ, ಹೈನೋದ್ಯಮದ ಮೂಲಕ ರೈತರು ಲಾಭವನ್ನೂ ಮಾಡಿಕೊಳ್ಳಬಹುದು. ಇದರ ದರ ಒಂದಕ್ಕೆ ಸರಾಸರಿ 5 ಲಕ್ಷ ರೂ.ಗಳಾಗಿದ್ದು, ರಾಜಸ್ಥಾನ, ಗುಜರಾತ್ ಮೂಲದ ತಳಿಯಿದು ಎನ್ನುತ್ತಾರೆ ಬೇಗೂರು ಶ್ರೀಕೃಷ್ಣ ಗೋಶಾಲೆಯ ಹಸುಗಳ ಮಾಲೀಕ ಸಿ.ಎನ್. ಕೃಷ್ಣಮೂರ್ತಿ.

ಶ್ವೇತ ಎಂದರೆ ಬಿಳಿ ಬಣ್ಣ ಮತ್ತು ಕಪಿಲಾ ಎಂದರೆ ಏಕರೂಪದ ಬಿಳಿ ಬಣ್ಣ ಹೊಂದಿರುವ ಹಸು ಎಂದು ಅರ್ಥ. ಈ ತಳಿಯು ಹೆಚ್ಚು ಬಿಸಿ ಮತ್ತು ಆರ್ದ್ರ ವಾತಾವರಣಕ್ಕೆ ಹೊಂದಿಕೊಳ್ಳುತ್ತದೆ. ಗಟ್ಟಿ ಮತ್ತು ನಿಡಿದಾದ ಕೊಂಬುಗಳನ್ನು ಹೊಂದಿರುತ್ತವೆ.

13 ಲಕ್ಷ ರೂ. ಬೆಲೆಯ ಬನ್ನೂರು ಹಳ್ಳಿಕಾರ್

